ಜೂನ್ 2011

*Magazine on Low External Input Sustainable Agriculture*
*Compilation of selected translated articles into Kannada*

# LEISA INDIA

## ಲೀಸಾ ಇಂಡಿಯ

ವಿಶೇಷ ಕನ್ನಡ ಸಂಚಿಕೆ



# ಲೀಸಾ ಇಂಡಿಯ

**ವಿಶೇಷ ಕನ್ನಡ ಸಂಚಿಕೆ**

**ಜೂನ್ 2011, ಸಂಚಿಕೆ 1**

ಈ ಸಂಚಿಕೆಯು 'ಲೀಸಾ ಇಂಡಿಯಾ' ಆಂಗ್ಲ ಆವೃತ್ತಿಯಲ್ಲಿ ಪ್ರಕಟವಾದ ಆಯ್ದ ಲೇಖನಗಳ ಅನುವಾದಗಳನ್ನು ಒಳಗೊಂಡಿದೆ.



**ವಿಳಾಸ:** ಎ.ಎಮ್.ಇ ಫೌಂಡೇಷನ್<br>
ನಂ.204, 100 ಫೀಟ್ ರಿಂಗ್‌ರೋಡ್,<br>
ಮೂರನೇ ಫೇಸ್,<br>
ಬನಶಂಕರಿ ಎರಡನೇ ಬ್ಲಾಕ್,<br>
ಮೂರನೇ ಸ್ಟೇಜ್,<br>
ಬೆಂಗಳೂರು 560085<br>
ದೂರವಾಣಿ. +91–080–2669951<br>
26699522<br>
ಫ್ಯಾಕ್ಸ್ +91–080–26699410



**ಲೀಸಾ ಇಂಡಿಯ**

'ಲೀಸಾ ಇಂಡಿಯಾ' ಆಂಗ್ಲ ಆವೃತ್ತಿಯನ್ನು ಎಎಂಇ ಫೌಂಡೇಶನ್ ಸಂಸ್ಥೆಯು ಇಳೆಯದ (ILEIA) ಸಹಯೋಗದೊಂದೊಗೆ ತ್ರೈಮಾಸಿಕವಾಗಿ ಪ್ರಕಟಿಸುತ್ತಿದೆ.

**ಸಂಪಾದಕೀಯ ಮಂಡಳಿ**

**ಮುಖ್ಯ ಸಂಪಾದಕ :** ಕೆ.ವಿ.ಎಸ್.ಪ್ರಸಾದ್

**ವ್ಯವಸ್ಥಾಪಕ ಸಂಪಾದಕಿ :** ಟಿ.ಎಂ.ರಾಧ

**ಕನ್ನಡ ಅನುವಾದ**

ಪೂರ್ಣಪ್ರಜ್ಞ ಬೇಳೂರು

**ಕನ್ನಡ ಅನುವಾದಗಳ ಸಮನ್ವಯ**

ಅರುಣಕುಮಾರ ಶಿವರಾಯ

**ಕಾರ್ಯ ನಿರ್ವಹಣೆ**

ಎಂ.ಶೋಭಾ ಮಯ್ಯ

**ಪುಟ ವಿನ್ಯಾಸ**

ಬೇಳೂರು ಸುದರ್ಶನ

**ಮುದ್ರಣ**

ಸ್ವಾನ್ ಪ್ರಿಂಟ್, ಬೆಂಗಳೂರು

**ಮುಖಪುಟ ಚಿತ್ರ**

'ಆಹಾರದ ಭದ್ರತೆಗೆ ಕಿರುಧಾನ್ಯಗಳನ್ನು ಬೆಳೆಯುವುದು'

**ಚಿತ್ರ:** ಎ ಎಂ ಇ ಫೌಂಡೇಶನ್


## ಲೀಸಾ ಮ್ಯಾಗಝೀನ್

**ವಿವಿಧ ಆವೃತ್ತಿಗಳು**

ಲ್ಯಾಟಿನ್ ಅಮೇರಿಕನ್, ಇಂಡೋನೇಷಿಯನ್, ಪಶ್ಚಿಮ ಆಫ್ರಿಕನ್, ಬ್ರೆಜಿಲಿಯನ್ ಮತು. ಚೈನೀಸ್ ಆವೃತ್ತಿಗಳು

## ಲೀಸಾ ಇಂಡಿಯಾ ಮ್ಯಾಗಝೀನ್

**ಇತರೆ ಪ್ರಾದೇಶಿಕ ಆವೃತ್ತಿಗಳು**

ಹಿಂದಿ, ಒರಿಯಾ, ತಮಿಳು ಮತ್ತು ತೆಲುಗು


**ಈ ಸಂಚಿಕೆಯಲ್ಲಿ ಪ್ರಕಟವಾದ ವಿಷಯಗಳನ್ನು ಎಲ್ಲಾ ರೀತಿಯ ಎಚ್ಚರಿಕೆಯಿಂದ ಪರಿಶೀಲಿಸಿ ಸಾಧ್ಯವಾದಷ್ಟು ಸರಿಯಾಗಿ ನೀಡಲು ಪ್ರಯತ್ನಿಸಲಾಗಿದೆ. ಹೀಗಿದ್ದೂ , ಅಂತಿಮವಾಗಿ ಇಲ್ಲಿ ಪ್ರಕಟವಾದ ಲೇಖನಗಳಲ್ಲಿರುವ ವಿಷಯಗಳಿಗೆ ಆಯಾ ಲೇಖಕರೇ ಜವಾಬ್ದಾರರು.**

**ಇಲ್ಲಿ ಪ್ರಕಟವಾದ ಲೇಖನಗಳ ಪಡಿಯಚ್ಚನ್ನು ಮಾಡಿ ಇತರ ಓದುಗರಿಗೆ ಹಂಚಲು ಸಂಪಾದಕೀಯ ಮಂಡಳಿಯ ಒಪ್ಪಿಗೆಯಿದೆ.**


# ಪ್ರಿಯ ಓದುಗರೇ.

**ನಿಮಗೆಲ್ಲ ಗೊತ್ತಿರುವಂತೆ ನಾವು ಕನ್ನಡದ ಆವೃತ್ತಿಯನ್ನು 2009ರಲ್ಲಿ ಒಂದು ಪ್ರಾಯೋಗಿಕ ಉಪಕ್ರಮವಾಗಿ ಆರಂಭಿಸಿದೆವು. ನಮಗೆ ಓದುಗರಿಂದ ಅತ್ಯುತ್ತಮ ಪ್ರತಿಕ್ರಿಯೆ ದೊರೆಯಿತು. ಈ ಪ್ರತಿಕ್ರಿಯೆಯಿಂದ ಸ್ಫೂರ್ತಿ ಪಡೆದ ನಾವು 2010ರಲ್ಲೂ ಈ ಸಂಚಿಕೆಯನ್ನು, ಮಿತ ಸಂಪನ್ಮೂಲದೊಂದಿಗೆ, ಪ್ರಕಟಿಸಲು ಸಾಧ್ಯವಾಯಿತು. ಮುಂಚೂಣಿ ಕೃಷಿ ಬ್ಯಾಂಕಿಂಗ್ ಸಂಸ್ಥೆಯಾದ ನಬಾರ್ಡ್(NABARD) 2010ರ ಒಂದು ಸಂಚಿಕೆಯ ಉತ್ಪಾದನೆಯನ್ನು ಬೆಂಬಲಿಸಿತು. ಅಲ್ಲದೆ ಹಲವಾರು ಲೀಸಾ ಆಸಕ್ತರು ಈ ಯತ್ನವನ್ನು ಸಾಧ್ಯವಾಗಿಸಿದರು ಎಂಬುದನ್ನು ಇಲ್ಲಿ ಸ್ಮರಿಸುತ್ತೇವೆ.**

**2011–13ರ ಕಾಲಾವಧಿಯ ಈ ಸಂಚಿಕೆಗಳನ್ನು ಬೆಂಬಲಿಸಲು ಜರ್ಮನಿಯ ನಿಧಿ ಸಂಘಟನೆ ಮಿಸೆರಿಯೋರ್ (MISEREOR) ಒಪ್ಪಿದೆ ಎಂದು ನಿಮಗೆ ತಿಳಿಸಲು ನಮಗೆ ಸಂತಸವಾಗುತ್ತಿದೆ. ಈ ಬೆಂಬಲದೊಂದಿಗೆ ನಾವು ತಳಮಟ್ಟದಲ್ಲಿ ಇನ್ನೂ ಹೆಚ್ಚು ಓದುಗರನ್ನು ಮತ್ತು ಸಂಸ್ಥೆಗಳನ್ನು ತಲುಪುವ ಆಶಯ ಹೊಂದಿದ್ದೇವೆ. ಜೀವಿಪರಿಸ್ಥಿತಿ ರೀತ್ಯಾ ಕೃಷಿಯಲ್ಲಿ ಆಸಕ್ತಿ ಹೊಂದಿರುವ ವ್ಯಕ್ತಿ ಮತ್ತು ಸಂಸ್ಥೆಗಳನ್ನು ತಲುಪಲು ನಮಗೆ ಸಹಕರಿಸಿ. ಅವರಿಗೆ ನಮ್ಮ ಮ್ಯಾಗಜಿನ್‌ನ್ನು ಸಂತೋಷದಿಂದ ಕಳಿಸುತ್ತೇವೆ. ದಯವಿಟ್ಟು ಈ ಸಂಚಿಕೆಯೊಂದಿಗೆ ಕೊಟ್ಟಿರುವ ಅರ್ಜಿಯನ್ನು ತುಂಬಿ ಕಳಿಸಿಕೊಡಿ.**

**ನಾವು 'ಲೀಸಾ ಇಂಡಿಯಾ'ವನ್ನು ಇನ್ನೂ ಬೇರೆ ನಾಲ್ಕು ಭಾರತೀಯ ಭಾಷೆಗಳಲ್ಲಿ – ಹಿಂದಿ, ತಮಿಳು, ತೆಲುಗು ಮತ್ತು ಒರಿಯಾ – ಪ್ರಕಟಿಸುತ್ತಿದ್ದೇವೆ. ಇವುಗಳನ್ನು ನೋಡಲು ನಿಮಗೆ ಆಸಕ್ತಿಯಿದ್ದರೆ www. leisaindia.org ಈ ಜಾಲತಾಣಕ್ಕೆ ಭೇಟಿ ನೀಡಿ.**

**ಎಲ್ಲಕ್ಕಿಂತ ಮುಖ್ಯವಾಗಿ ನಾವು ಮ್ಯಾಗಜಿನ್ ಕುರಿತಂತೆ ನಿಮ್ಮ ಪ್ರತಿಕ್ರಿಯೆಯನ್ನು ನಿರೀಕ್ಷಿಸುತ್ತಿದ್ದೇವೆ. ನೀವು ನಿಮ್ಮ ಅಭಿಪ್ರಾಯಗಳನ್ನು, ಚಿಂತನೆಗಳನ್ನು ಮತ್ತು ಯಾವುದೇ ಪ್ರತಿಕ್ರಿಯೆಯನ್ನು ಅಂಚೆ ಮೂಲಕವಾಗಲೀ, leisaindia@yahoo.co.in ಈ ಈ ಮೈಲ್ ಮೂಲಕವಾಗಲೀ ಅಥವಾ www.leisaindia.org ಈ ಜಾಲತಾಣದಲ್ಲಿ ಬರೆಯುವ ಮೂಲಕವಾಗಲೀ ವ್ಯಕ್ತಪಡಿಸಬಹುದು.**

**– ಸಂಪಾದಕರು**

## ಲೀಸಾ LEISA

www.leisaindia.org

ಲೀಸಾ (LEISA)ವು ಬಾಹ್ಯ ಪರಿಕರಗಳ ಮಿತ ಬಳಕೆಯ ಸುಸ್ಥಿರ ಕೃಷಿಯ ಕುರಿತಾಗಿದೆ.ಇದು ಪಾರಿಸರಿಕವಾಗಿ ಯೋಗ್ಯವಾದ ವಿಧಾನದಲ್ಲಿ ತಮ್ಮ ಉತ್ಪಾದಕತೆ ಮತ್ತು ವರಮಾನವನ್ನು ಹೆಚ್ಚಿಸಿಕೊಳ್ಳಲು ಬಯಸುವ ರೈತರಿಗೆ ಇರುವ ತಾಂತ್ರಿಕ ಮತ್ತು ಸಾಮಾಜಿಕ ಆಯ್ಕೆಗಳ ಕುರಿತಾಗಿದೆ. ಲೀಸಾವು ಸ್ಥಳೀಯ ಸಂಪನ್ಮೂಲ ಮತ್ತು ನೈಸರ್ಗಿಕ ವಿಧಾನಗಳ ಹಿತ ಬಳಕೆಯ – ಒಂದೊಮ್ಮೆ ಅಗತ್ಯವೆನಿಸಿದರೆ ಬಾಹ್ಯ ಒಳಸುರಿಗಳ ಸುರಕ್ಷಿತ ಮತ್ತು ದಕ್ಷ ಬಳಕೆಯ – ಕುರಿತಾಗಿದೆ. ಇದು ತಮ್ಮ ಸ್ವಂತ ಜ್ಞಾನ, ಕೌಶಲ್ಯ, ಮೌಲ್ಯ, ಸಂಸ್ಕೃತಿ ಮತ್ತು ಸಂಸ್ಥೆಗಳನ್ನು ಮೂಲವಾಗಿಸಿಕೊಂಡು ಭವಿಷ್ಯವನ್ನು ಕಟ್ಟಿಕೊಳ್ಳಲು ಬಯಸುವ ಪುರುಷ ಮತ್ತು ಮಹಿಳಾ ರೈತರನ್ನು ಸಬಲರನ್ನಾಗಿಸುವುದು ಮತ್ತು ಸಮುದಾಯಗಳ ಕುರಿತಾಗಿದೆ.ಲೀಸಾವು ಕೃಷಿಯನ್ನು ಸುಧಾರಿಸುವ ಮತ್ತು ಅದನ್ನು ಬದಲಾಗುತ್ತಿರುವ ಅಗತ್ಯ ಮತ್ತು ಸನ್ನಿವೇಶಗಳಿಗೆ ತಕ್ಕಂತೆ ಹೊಂದಿಸುವ ಕೃಷಿಕರು ಮತ್ತು ಇತರೆ ಪಾತ್ರಧಾರಿಗಳ ಸಾಮರ್ಥ್ಯವನ್ನು ಬಲಪಡಿಸುವ ಭಾಗೇದಾರಿ ವಿಧಾನಗಳ ಕುರಿತಾಗಿದೆ. ಲೀಸಾವು ದೇಸಿ ಮತ್ತು ವೈಜ್ಞಾನಿಕ ಜ್ಞಾನವನ್ನು ಮಿಳಿತಗೊಳಿಸಲು ಬಯಸುತ್ತದೆ ಮತ್ತು ಈ ಕುರಿತ ಹೆಚ್ಚಿನ ಬೆಳವಣಿಗೆಗೆ ಅನುಕೂಲಕರ ವಾತಾವರಣವನ್ನು ಸೃಜಿಸಲು ನೀತಿ ನಿರೂಪಣೆಯ ಮೇಲೆ ಪ್ರಭಾವ ಬೀರಬಯಸುತ್ತದೆ. ಲೀಸಾವು ಒಂದು ಪರಿಕಲ್ಪನೆಯಾಗಿದೆ; ಒಂದು ಮಾರ್ಗ ಮತ್ತು ಒಂದು ರಾಜಕೀಯ ಸಂದೇಶವಾಗಿದೆ.

## ಎ ಎಂ ಇ ಫೌಂಡೇಶನ್

www.amefound.org

ಎ ಎಂ ಇ ಪ್ರತಿಷ್ಠಾನವು ಬೇಸಾಯದ ಪರ್ಯಾಯಗಳನ್ನು ರೂಪಿಸುವ, ಕೃಷಿಕರ ಅರಿವನ್ನು ಸಿರಿವಂತಗೊಳಿಸುವ,ಅಭ್ಯುದಯ ಸಂಸ್ಥೆಗಳನ್ನು ಒಗ್ಗೂಡಿಸುವ ಮತ್ತು ಅನುಭವಗಳನ್ನು ಹಂಚಿಕೊಳ್ಳುವ ಮೂಲಕ ದಕ್ಷಿಣ ಪ್ರಸ್ತಭೂಮಿಯ ಅರೆ ಒಣ ಪ್ರದೇಶಗಳ ಸಣ್ಣ ಮತ್ತು ಮಧ್ಯಮ ಕೃಷಿಕರಲ್ಲಿ ಪಾರಿಸರಿಕ ಕೃಷಿಯನ್ನು ಉತ್ತೇಜಿಸುತ್ತಿದೆ.


**ವಿಶ್ವಸ್ಥರು**

**ಅಧ್ಯಕ್ಷರು** : ಡಾ.ಆರ್.ದ್ವಾರಕೀನಾಥ್

**ಖಜಾಂಚಿ** : ಶ್ರೀ ಎಸ್.ಎಲ್.ಶ್ರೀನಿವಾಸ್

**ಸದಸ್ಯರು** : ಡಾ.ಎಂ.ಮಹಾದೇವಪ್ಪ, ಡಾ.ವಿ.ವೀರಭದ್ರಯ್ಯ, ಡಾ.ಎನ್.ಕೆ.ಸಾಂಘಿ, ಡಾ. ಎನ್.ಜಿ.ಹೆಗಡೆ, ಡಾ. ಟಿ.ಎಂ. ತ್ಯಾಗರಾಜನ್, ಡಾ. ವಿಠಲ ರಾಜನ್.


## ಮಿಸೆರಿಯೊರ್ MISEREOR

www.misereor.org

ಅಭಿವೃದ್ಧಿ ಸಹಕಾರ ಸಂಘಟನೆ ಮಿಸೆರಿಯೊರ್‌ನ್ನು ಜರ್ಮನ್ ಕ್ಯಾಥೋಲಿಕ್ ಬಿಶಪ್‌ರು ಇಸವಿ 1958ರಲ್ಲಿ ಸ್ಥಾಪಿಸಿದರು. ಕಳೆದ 50 ವರ್ಷಗಳಿಂದ ಮಿಸೆರಿಯೊರ್ ಆಫ್ರಿಕ, ಏಷಿಯಾ, ಹಾಗೂ ಲ್ಯಾಟಿನ್ ಅಮೇರಿಕಾಗಳಲ್ಲಿ ಬಡತನದ ವಿರುದ್ಧದ ಹೋರಾಟಕ್ಕೆ ವಚನಬದ್ಧವಾಗಿದೆ. ಧರ್ಮ, ಪರಂಪರೆ ಅಥವಾ ಲಿಂಗವನ್ನು ಪರಿಗಣಿಸದೆ ಅಗತ್ಯವಿರುವ ಯಾವುದೇ ಮಾನವ ಜೀವಿಗೂ ಮಿಸೆರಿಯೊರ್‌ನ ಸಹಕಾರ ಲಭ್ಯವಿದೆ.

ಬಡವರು ಮತ್ತು ಅನುಕೂಲರಹಿತರು ನಡೆಸುವ ಮತ್ತು ಮಾಲೀಕತ್ವದ ಯೋಜನೆಗಳಿಗೆ ಮಿಸೆರಿಯೊರ್ ಬೆಂಬಲ ಲಭ್ಯವಿದೆ. ಇದು ಸ್ಥಳೀಯ ಪಾಲುಗಾರರ ಜೊತೆ ಕೆಲಸ ಮಾಡಲು ಮೊದಲ ಆದ್ಯತೆ ನೀಡುತ್ತದೆ. ಅವುಗಳೆಂದರೆ ಚರ್ಚ್–ಆಧಾರಿತ ಸಂಸ್ಥೆಗಳು, ಸರಕಾರೇತರ ಸಂಸ್ಥೆಗಳು, ಸಾಮಾಜಿಕ ಚಳುವಳಿಗಳು ಮತ್ತು ಸಂಶೋಧನ ಸಂಸ್ಥೆಗಳು. ಯೋಜನೆಗಳ ಅನುಷ್ಠಾನ ಮತ್ತು ಸ್ಥಳೀಯ ಅಭಿವೃದ್ಧಿ ಪ್ರಕ್ರಿಯೆಯನ್ನು ರಚಿಸುವಲ್ಲಿ ಫಲಾನುಭವಿಗಳ ಜೊತೆಗೂಡಿ ಪಾಲುಗಾರರು ಸಹಾಯಮಾಡುವಲ್ಲಿ ತೊಡಗಿಸಿಕೊಂಡಿದ್ದಾರೆ. ಈ ರೀತಿಯಾಗಿ ಮಿಸೆರಿಯೊರ್ ತನ್ನ ಪಾಲುಗಾರರೊಡಗೂಡಿ ನಿರಂತರವಾಗಿ ಬದಲಾಗುತ್ತಿರುವ ಸವಾಲುಗಳಿಗೆ ಪ್ರತಿಸ್ಪಂದಿಸುತ್ತದೆ.

# ವಿಷಯಸೂಚಿ




## ಬೆಳೆ ವೈವಿಧ್ಯದತ್ತ ಸಣ್ಣ ರೈತರ ಚಿತ್ತ

ಹೊಲಕ್ಕೆ ವಿವಿಧ ಅಂಶಗಳ ಸೇರ್ಪಡೆ ಹಾಗೂ ಅವುಗಳ ಮಿಶ್ರ ಕೃಷಿಯಿಂದಾಗಿ ತಮಿಳುನಾಡಿನ ಸಣ್ಣರೈತರು ಅತ್ಯಧಿಕ ಇಳುವರಿ ಪಡೆಯಲು ಸಹಾಯಕವಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಪ್ರೋತ್ಸಾಹಿಸಿದ ಜೈವಿಕ ಅಂಶಗಳನ್ನೊಳಗೊಂಡ ಮಾದರಿ ಹೊಲ ಹಾಗೂ ಕೃಷಿ ಪರಿಸರ ಮೂಲತತ್ವಗಳನ್ನು ಆಧಾರಿಸಿದ್ದಕ್ಕೆ ಸುಸ್ಥಿರ ಕೃಷಿ ಉತ್ಪನ್ನ ಹಾಗೂ ಜೀವನೋಪಾಯ ಸಿದ್ಧಿಸಿದೆ.

■ ಎನ್. ಲಲಿತ, ಜೆ. ಡಿರಾವಿಯಮ್ ಮತ್ತು ಅರುಣ್ ಬಳಮಟ್ಟಿ **4**



## ಆದಾಯ ಗಳಿಕೆಗೆ ಪರ್ಯಾಯ ಮಾರ್ಗ

ಕರ್ನಾಟಕದ ಲಕ್ಕವನಹಳ್ಳಿ ಹಾಗೂ ಸುತ್ತಲಿನ ಒಣಭೂಮಿ ರೈತರು ಅದಾಯ ಗಳಿಕೆಯಲ್ಲಿ ಪರ್ಯಾಯ ಮಾರ್ಗವನ್ನು ಕಂಡುಕೊಂಡಿದ್ದಾರೆ. ಆ ಪ್ರದೇಶದಲ್ಲಿರುವ ಸರ್ಕಾರೇತರ ಸಂಸ್ಥೆ ಐಡಿಎಫ್‌ನ ಮಧ್ಯಸ್ಥಿಕೆ ಹಾಗೂ ಪರ್ಯಾಯ ಚಟುವಟಿಕೆಗಳನ್ನು ಪರಿಚಯಿಸಿದ್ದರಿಂದಾಗಿ ಒಣಭೂಮಿ ರೈತರು ಪಟ್ಟಣಗಳಿಗೆ ಕೂಲಿಗಾಗಿ ವಲಸೆ ಹೋಗುವುದು ತಗ್ಗಿದೆ. ಈ ರೈತರು ಮೌಲ್ಯ ಸರಪಣಿಯ ಸಾಮರ್ಥ್ಯ ತಿಳಿದಿದ್ದಾರೆ. ಇದು ಅವರಿಗೆ ತಮ್ಮ ಉತ್ಪಾದನೆಗಳನ್ನು ಮಾರಲು, ತಮ್ಮ ಉದ್ಯಮಶೀಲ ಸಾಮರ್ಥ್ಯವನ್ನು ಚುರುಕುಗೊಳಿಸಲು, ವಲಸೆ ಕಡಿಮೆಯಾಗಲು ಸಹಾಯಕವಾಗಿದೆ.

■ ಶ್ರೀಕಾಂತ ಶೆಣೈ ಟಿ.ವಿ. **6**

## ಸರಳ ಒಲೆ ಕಟ್ಟಿಕೊಟ್ಟ ಬದುಕು

ನವೀಕರಿಸಬಹುದಾದ ಶಕ್ತಿ, ಆಹಾರ ಸಂಸ್ಕರಣೆ ಮತ್ತು ಸುಸ್ಥಿರ ಕೃಷಿಕ್ಷೇತ್ರಗಳಲ್ಲಿ ಆದಾಯವರ್ಧನೆಗೋಸ್ಕರ ಸೂಕ್ತ ತಂತ್ರಜ್ಞಾನಗಳನ್ನು ಅಳವಡಿಸಬಹುದಾದ ಹೊಸ ಮಾರ್ಗಗಳನ್ನು ಗ್ರಾಮೀಣ ಮಹಿಳೆಯರು ಕಂಡುಕೊಂಡಿದ್ದಾರೆ. ಅನ್ವಯಿತ ತಂತ್ರಜ್ಞಾನಗಳು ಸಾಮರ್ಥ್ಯ ನಿರ್ಮಾಣವನ್ನು ದ್ವಿಗುಣಗೊಳಿಸಿ ಅವರ ವಿಶ್ವಾಸದ ಮಟ್ಟ ಮತ್ತು ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಉತ್ತೇಜಿಸುತ್ತದೆ.

■ ಆರ್.ಪ್ರಭಾ **10**



## ಮಶ್ರೂಮ್ ಮಹಿಳೆ ತೋರಿದ ಮಾರ್ಗ

ಕೇರಳದಲ್ಲಿ ಅಣಬೆ ಕೃಷಿಯು ಉದ್ಯೋಗ ಹಾಗೂ ಆದಾಯಕ್ಕೆ ಅಡೆತಡೆಯಿಲ್ಲದ ಸತ್ವಯುತ ಮೂಲವಾಗಿದೆ. ನಿರುದ್ಯೋಗಿ ಯುವ ಜನಾಂಗಕ್ಕೆ ಉತ್ಸಾಹಿ ಉದ್ಯಮಶೀಲೆ ಜಾನಕಿ ಸ್ವಯಂ ಬೆಳೆಸಿದ ಅಣಬೆ ಉತ್ಪಾದನಾ ಉದ್ಯಮ ಒಂದು ಮಾದರಿ.

■ ಜಿ.ಎಸ್.ಉನ್ನಿಕ್ರಿಷ್ಣನ್ ನಾಯರ್ **14**

## ಮೌಲ್ಯವರ್ಧನೆ ಎಂಬ ಮಂತ್ರ– ಉತ್ತಮ ಆದಾಯಕ್ಕೊಂದು ಸೂತ್ರ

ಸಮುದಾಯ ಆಧಾರಿತ ಸಂಘಟನೆಗಳು ಸ್ವಸುಸ್ಥಿರ ಮಾದರಿಗಳನ್ನು ಸೃಷ್ಟಿಸಿ, ಸಣ್ಣರೈತರಿಗೆ ಮತ್ತು ಗ್ರಾಮೀಣ ಉದ್ಯಮಿಗಳಿಗೆ ಗ್ರಾಮಾಂತರ ಪ್ರದೇಶದಲ್ಲಿಯೇ ಆದಾಯ ಹೆಚ್ಚಳ ಹಾಗೂ ಸುಸ್ಥಿರತೆಗೆ ಹೊಸ ಅವಕಾಶಗಳನ್ನು ತೆರೆದಿವೆ. ಸಿಸಿಡಿಯ ಈ ಬದಲಾವಣೆಯ ಹೆಜ್ಜೆಯು ಗ್ರಾಮೀಣ ಹಕ್ಕೊತ್ತಾಯಗಳಾದ ಆಹಾರ, ಆರೋಗ್ಯ, ಶಕ್ತಿ ಮತ್ತು ಉದ್ಯೋಗಗಳನ್ನು ತಲುಪಲು ಸಹಾಯಕವಾಗಿದೆ. ಗ್ರಾಮೀಣ ಉತ್ಪನ್ನಗಳಿಗೆ ಮಾರುಕಟ್ಟೆ ಅವಕಾಶಗಳನ್ನು ಸಹಾ ಸೃಷ್ಟಿಸಿದೆ.

■ ಉತ್ಕರ್ಷ್ ಘಾಟೆ **15**



## ಕೃಷಿಯಲ್ಲಿ ಇರಲಿ – ಮಹಿಳೆಗೆ ಮೊದಲ ಆದ್ಯತೆ

ದೇಸೀ ತಳಿಗಳ ಬೀಜದ ಮೇಲೆ ಹಿಡಿತ ಸಾಧಿಸಿ ಕೃಷಿವೈವಿಧ್ಯವನ್ನು ಗ್ರಾಮೀಣ ಮಹಿಳೆಯರು ಮರಳಿ ಪಡೆದಿದ್ದಾರೆ. ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿಯು ಪರ್ಯಾಯ ಪಿಡಿಎಸ್ ಮತ್ತು ಆಹಾರ ಸುಭದ್ರತಾ ಟ್ರಸ್ಟ್ ಪ್ರಾರಂಭಿಸಿ ಆಹಾರ ಹಾಗೂ ಪೌಷ್ಠಿಕಾಂಶಗಳು ಸುಲಭವಾಗಿ ದೊರಕುವಂತೆ ಭರವಸೆ ನೀಡಿದ್ದಲ್ಲದೆ ಮುಂದಾಳತ್ವ ವಹಿಸುವ ಸಾಮರ್ಥ್ಯವನ್ನು ಬಲಗೊಳಿಸುವ ಮೂಲಕ ಮಹಿಳೆಯರನ್ನು ಸಬಲರನ್ನಾಗಿಸಿದೆ.

■ ಪಿ.ವಿ. ಸತೀಶ್ **17**

# ಬೆಳೆ ವೈವಿಧ್ಯದತ್ತ ಸಣ್ಣ ರೈತರ ಚಿತ್ತ

■ ಎನ್. ಲಲಿತ, ಜೆ. ಡಿರಾವಿಯಮ್ ಮತ್ತು ಅರುಣ್ ಬಳಮಟ್ಟಿ

**ಹೊಲಕ್ಕೆ ವಿವಿಧ ಅಂಶಗಳ ಸೇರ್ಪಡೆ ಹಾಗೂ ಅವುಗಳ ಮಿಶ್ರ ಕೃಷಿಯಿಂದಾಗಿ ತಮಿಳುನಾಡಿನ ಸಣ್ಣರೈತರು ಅತ್ಯಧಿಕ ಇಳುವರಿ ಪಡೆಯಲು ಸಹಾಯಕವಾಗಿದೆ. ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯು ಪ್ರೋತ್ಸಾಹಿಸಿದ ಜೈವಿಕ ಅಂಶಗಳನ್ನೊಳಗೊಂಡ ಮಾದರಿ ಹೊಲ ಹಾಗೂ ಕೃಷಿ ಪರಿಸರ ಮೂಲತತ್ವಗಳನ್ನು ಆಧಾರಿಸಿದ್ದಕ್ಕೆ ಸುಸ್ಥಿರ ಕೃಷಿ ಉತ್ಪನ್ನ ಹಾಗೂ ಜೀವನೋಪಾಯ ಸಿದ್ಧಿಸಿದೆ.**

ತಮಿಳುನಾಡಿನ ಪೆರಂಬಲೂರು ಜಿಲ್ಲೆಯ ಸಣ್ಣರೈತರ ಜೀವನೋಪಾಯ ಹತ್ತಿ ಹಾಗೂ ನೆಲಗಡಲೆಯನ್ನು ಅವಲಂಬಿಸಿದೆ. ಆದರೆ ಹೆಚ್ಚಿದ ಉತ್ಪಾದನಾ ವೆಚ್ಚ ಹಾಗೂ ಕೂಲಿ ದರ, ದ್ವಿಗುಣಗೊಂಡ ಪೀಡೆನಾಶಕಗಳ ತೀವ್ರತೆ ಅವರನ್ನು ಒತ್ತಾಯಪೂರ್ವಕವಾಗಿ ಪರ್ಯಾಯ ಬೆಳೆಯತ್ತ ಚಿಂತಿಸುವಂತೆ ಮಾಡಿತು. ಅದು ಮೆಕ್ಕೆಜೋಳ ಅತ್ಯಧಿಕ ಮೌಲ್ಯದ ಬೆಳೆಯೆಂದು ಪರಿಗಣಿಸಲಾದ ಸಮಯ. ಪೌಲ್ಟ್ರಿಗಳಲ್ಲಿ ಆಹಾರವಾಗಿ ಬಳಕೆ ಹಾಗೂ ಹತ್ತಿ ಬೆಳೆಗಿಂತ ಕಡಿಮೆ ಕೂಲಿಕಾರರ ಅವಶ್ಯಕತೆ. ಸಹಜವಾಗಿ ಈ ಪ್ರದೇಶದ ರೈತರು ಮೆಕ್ಕೆಜೋಳದ ಬಗ್ಗೆ ಒಲವು ತೋರಿದರು.

ಮೆಕ್ಕೆಜೋಳದಿಂದ ಶುರುವಿನಲ್ಲಿ ರೈತರಿಗೆ ಲಾಭವಾಗಿತ್ತು. ಇದು ದುಡ್ಡಿನ ಗಿಡವಾದ ಕಾರಣ ರೈತರು ಬೇರೆಲ್ಲಾ ನಿರ್ಲಕ್ಷಿಸಿ ಇದನ್ನೊಂದೇ ಬೆಳೆಯತೊಡಗಿದರು. ಆದರೆ ಒಂದು ಅವಧಿಯ ನಂತರ ನಿರಂತರ ಮೆಕ್ಕೆಜೋಳವನ್ನೊಂದೇ ಬೆಳೆಯುವುದರಿಂದಾಗುವ ಸಮಸ್ಯೆಗಳು ತಿಳಿಯತೊಡಗಿದವು. ಕೆಲವು ನೇರವಾಗಿ ಮೆಕ್ಕೆಜೋಳದ ಕೃಷಿಗೆ ಸಂಬಂಧಿಸಿದ್ದು ಮತ್ತು ಕೆಲವು ಅನ್ಯ ಪರಿಣಾಮಗಳು. ಉದಾಹರಣೆಗೆ ಉತ್ಪಾದನಾ ವೆಚ್ಚದ ಹೆಚ್ಚಳ, ಇಳುವರಿ ಕುಸಿತ. ಒಮ್ಮೆ ಕೇವಲ ರಾಸಾಯನಿಕ ಗೊಬ್ಬರ ಹಾಗೂ ಕೂಲಿಗಳೇ ಉತ್ಪಾದನಾ ವೆಚ್ಚದ ಶೇಕಡಾ 81 ರಷ್ಟಾಗಿತ್ತು. ಜಾನುವಾರುಗಳಿಗೆ ಮೇವಿನ ಕೊರತೆ. ತರಕಾರಿ ಹಾಗೂ ದ್ವಿದಳ ಧಾನ್ಯಗಳನ್ನು ಬೆಳೆಯದೇ ಇರುವಿಕೆಯಿಂದ ಕುಟುಂಬದಲ್ಲಿ ಪೌಷ್ಠಿಕಾಂಶದ ಕೊರತೆ ಇತರ ಪರಿಣಾಮಗಳು.

## ಬದಲಾವಣೆಯ ಗಾಳಿ


ಇಸವಿ 2001ರಿಂದಲೂ ಅಭಿವೃದ್ಧಿಪರ ಸಂಸ್ಥೆ ಎಎಂಇಎಫ್ ಪೆರಂಬಲೂರು ರೈತರೊಂದಿಗೆ ಕೆಲಸ ಮಾಡುತ್ತಿತ್ತು. ಸಣ್ಣ ರೈತರ ಜೀವನೋಪಾಯದ ಕಳಕಳಿಯ ವಿಷಯಗಳು ಹಾಗೂ ಸವಾಲುಗಳನ್ನು ಎದುರಿಸುವ ಕುರಿತಾಗಿ ಇಸವಿ 2005ರಲ್ಲಿ ವಿಜ್ಞಾನ ಹಾಗೂ ತಂತ್ರಜ್ಞಾನ ವಿಭಾಗವು ಸಹಕಾರ ನೀಡಿತು. ಆ ಪ್ರದೇಶಕ್ಕೆ ಸೂಕ್ತವಾದ, ಚಟುವಟಿಕೆಗಳಿಂದ ಕೂಡಿದ ಯೋಜನೆಗಳನ್ನು ಆಯ್ದ ನಾಲ್ಕು ಹಳ್ಳಿಗಳಲ್ಲಿ ಸೂಕ್ತ ತಾಂತ್ರಿಕ ಮೇಲ್ವಿಚಾರಣೆಯೊಂದಿಗೆ ಪ್ರಾರಂಭಿಸಿತು. ಸಂಶೋಧನಾ ಸಹಭಾಗಿತ್ವದ ಮೂಲಕ, ಕೃಷಿ ಪರಿಸರ ಮೂಲತತ್ವಗಳನ್ನಾಧರಿಸಿದ, ಜೈವಿಕ ಅಂಶಗಳನ್ನೊಳಗೊಂಡ ಮಾದರಿ ಹೊಲಗಳ ಅಭಿವೃದ್ಧಿ. ಈ ಮೂಲಕ ಸಣ್ಣ ರೈತರಿಗೆ ಜೀವನಮಟ್ಟದ ಭದ್ರತೆ ಮತ್ತು ಪೌಷ್ಠಿಕತೆಯ ಭರವಸೆ ನೀಡುವ ಗುರಿ.

ಮಾಳವರಾಯನಲ್ಲೂರು, ವೈಧಾಯಾನಂತಪುರಂ, ಮಿಳಗನಾದಂ ಮತ್ತು ಪೆರುಮಧುರಕೂಡಿಕಾಡು ಹಳ್ಳಿಗಳ ಐವರು ರೈತರು ಸಂಶೋಧನಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು.



ಸಹಭಾಗಿತ್ವ ಕಾರ್ಯವಿಧಾನದ ಮೂಲಕ ಇವರ ಆಯ್ಕೆ. ಇವರನ್ನು "ಪ್ರಯೋಗಶೀಲ" ರೈತರು ಎನ್ನಲಾಯಿತು. ಗುಂಪಿನಲ್ಲಿ ಇನ್ನಿತರ ರೈತರು ಇದ್ದರು. ಅವರು ತಮ್ಮ ಹೊಲಗಳಲ್ಲಿ ಪ್ರಯೋಗ ನಡೆಸುವಂತಿಲ್ಲ. ಆದರೆ ಪ್ರಾಯೋಗಿಕ ಹೊಲವನ್ನು ಅನುದಿನ ಗಮನಿಸುತ್ತಿರಬೇಕು. ಇವರು ನಿರೀಕ್ಷಕ ರೈತರು. ಹೀಗೆ ನಾಲ್ಕು ಹಳ್ಳಿಗಳಿಂದ ಸುಮಾರು 52 ನಿರೀಕ್ಷಕ ರೈತರು. ಈ ಎಲ್ಲರ ಜೊತೆ ಸೇರಿದ ಸಮಾನ ಮನಸ್ಕ ಗುಂಪನ್ನು ಪ್ರತಿ ಹಳ್ಳಿಯಲ್ಲೂ ಸಿದ್ಧಗೊಳಿಸಲಾಗಿತ್ತು.

ಸಹಜ ಸಂಪನ್ಮೂಲಗಳ ನಿರ್ವಹಣೆ ಮತ್ತು ಕೃಷಿಯಲ್ಲಿ ಸಂಮಿಶ್ರ ಚಟುವಟಿಕೆಗಳ ಮೂಲಕ ಸಾಮರ್ಥ್ಯವರ್ಧನೆ. ಸಹಭಾಗಿತ್ವದಲ್ಲಿ ತಾಂತ್ರಿಕ ಅಭಿವೃದ್ಧಿ ಮತ್ತು ರೈತ ಕ್ಷೇತ್ರ ಪಾಠಶಾಲೆ ಕಾರ್ಯವಿಧಾನಗಳ ಮೂಲಕ ಈ ಕುರಿತು ರೈತ ಗುಂಪುಗಳಿಗೆ ತಿಳುವಳಿಕೆ. ತರಬೇತಿಯಲ್ಲಿ ಕಲಿಸಬೇಕಾದ ವಿಷಯಗಳ ಕುರಿತು ರೈತರೊಂದಿಗೆ ಚರ್ಚಿಸಿ ನಿರ್ಧಾರ. ಪ್ರಸ್ತುತ ಬೆಳೆಪದ್ಧತಿಯಲ್ಲಿ ಉತ್ಪಾದನೆ ಹೆಚ್ಚಿಸುವಿಕೆ ಮತ್ತು ಪ್ರಸ್ತುತ ಕೃಷಿ ಪದ್ಧತಿಯ ಬಲವರ್ಧನೆಗೆ ಹೊಸ ಅಂಶಗಳ ಸೇರ್ಪಡೆಗೆ ಆದ್ಯತೆ. ಸಹಜ ಸಂಪನ್ಮೂಲಗಳ ಕುರಿತ ತಿಳುವಳಿಕೆಯಲ್ಲಿ ಮಣ್ಣು, ನೀರಿನ ಸಂರಕ್ಷಣೆ, ಮಣ್ಣಿನ ಫಲವತ್ತತೆಯ ನಿರ್ವಹಣೆ, ಸುಧಾರಿತ ಬೆಳೆ ಪದ್ಧತಿ ಹಾಗೂ ಆದಾಯ ಉತ್ಪನ್ನ ಚಟುವಟಿಕೆಗಳೂ ಇದ್ದವು.




ಕಲಿಕಾ ಕಾರ್ಯವಿಧಾನದಲ್ಲಿ ಭಾಗವಹಿಸುವುದನ್ನು ಹೊರತುಪಡಿಸಿ, ಪ್ರತಿ ಗುಂಪಿನಿಂದ ಒಬ್ಬ ಪ್ರತಿನಿಧಿಯನ್ನು ಆರಿಸಿ ನಾಲ್ಕೂ ಗುಂಪುಗಳ ಒಂದು ಒಕ್ಕೂಟದ ರಚನೆ. ಪರ್ಯಾಯ ಕಲಿಕೆ ಹಾಗೂ ಒಗ್ಗಟ್ಟಾಗಿ ಚಟುವಟಿಕೆಗಳನ್ನು ನಡೆಸುವುದು ಒಕ್ಕೂಟದ ಪ್ರಮುಖ ಗುರಿ.

## ವೈವಿಧ್ಯ ಹೆಚ್ಚಳ

ಯೋಜನೆಯ ಪ್ರಾರಂಭದಲ್ಲಿ ಜಾನುವಾರು, ಕೃಷಿ ಮತ್ತು ಹಿತ್ತಿಲು ಇವು ರೈತರ ಬಳಿ ಇದ್ದ ಮೂಲ ಕೃಷಿ ಅಂಶಗಳು. ಅಲ್ಲಿ ವೈವಿಧ್ಯದ ಕೊರತೆ ಇತ್ತು. ಉದಾಹರಣೆಗೆ ಮೆಕ್ಕೆಜೋಳವನ್ನು ಮಾತ್ರ ಬೆಳೆಯುತ್ತಿದ್ದರು ಮತ್ತು ಮೇವಿನ ಜೋಳವನ್ನು ಕೇವಲ ಜಾನುವಾರುಗಳ ಮೇವಿಗೋಸ್ಕರ ಬೆಳೆಯುತ್ತಿದ್ದರು. ಹಸು ಅಥವಾ ಆಡು ಅಥವಾ ಕೋಳಿ ಯಾವುದಾದರೂ ಒಂದು ವಿಧದ ಜಾನುವಾರನ್ನು ಸ್ವಾಭಾವಿಕವಾಗಿ ಹೊಂದಿರುತ್ತಿದ್ದರು. ಹಿತ್ತಲಿನಲ್ಲಿ ಮನೆಬಳಕೆಗಾಗಿ ಕುಂಬಳ ಅಥವಾ ಚಪ್ಪರದವರೆಯಂತಹ ತರಕಾರಿಗಳನ್ನು ಮಾತ್ರ ಬೆಳೆಯುತ್ತಿದ್ದರು. ಗೊಬ್ಬರ ಮಾಡುವ ಪದ್ಧತಿ ಸಹ ಒರಟಾಗಿತ್ತು. ಅಲ್ಲಿ ಅನೇಕ ಮರಗಳಿಂದ ಬೇಕಾದಷ್ಟು ದರಕೆಲೆಗಳು ಉತ್ಪತ್ತಿಯಾಗುತ್ತಿದ್ದವು. ಹೊಲಗಳಲ್ಲಿ ಕೇವಲ ಬೇವು ಮತ್ತು ಕಾಡುನುಗ್ಗೆಗಳನ್ನು ಮಾತ್ರ ಬೆಳೆಯುತ್ತಿದ್ದರು. ಇವೆಲ್ಲಾ ಪ್ರತ್ಯೇಕ ಅಸ್ತಿತ್ವ ಹೊಂದಿದ ಚಟುವಟಿಕೆಗಳು. ಹೀಗಾಗಿ ಪ್ರಸ್ತುತ ಕೃಷಿ ಪದ್ಧತಿಯು ಹೊರಗಿನ ಒಳಸುರಿಗಳ ಮೇಲೆ ಅತಿಯಾಗಿ ಅವಲಂಬಿತವಾಗಿತ್ತು. ಉತ್ಪಾದನಾ ವೆಚ್ಚ ಹೆಚ್ಚಳಕ್ಕೆ ಇದೂ ಒಂದು ಕಾರಣವಾಗಿತ್ತು.

ಕಾರ್ಯಕ್ರಮದ ಮೇಲ್ವಿಚಾರಣೆಯಲ್ಲಿ ವಿವಿಧ ಅಂಶಗಳ ವೈವಿಧ್ಯ

ಗಣನೀಯವಾಗಿ ಹೆಚ್ಚಿತು. ಮೊದಲನೆಯದಾಗಿ ಬೆಳೆಗಳ ಸಂಖ್ಯೆ ಹೆಚ್ಚಿತು. ಮೊದಲ ವರ್ಷ ಮಿಶ್ರ ಬೆಳೆಯಾಗಿ ಕೆಂಪುಬೇಳೆ ಹಾಗೂ ಸೆಣಬನ್ನು ಮೆಕ್ಕೆಜೋಳದ ಮಧ್ಯೆ ಬೆಳೆಯಲಾಯಿತು. ಎರಡನೆಯ ವರ್ಷ ಹರಳು, ಹೆಸರು, ಸಿಂಫೊಪೋಗನ್ ಮತ್ತು ನೇಪಿಯರ್ ಹುಲ್ಲುಗಳು ಸೇರಿಕೊಂಡವು. ಮೂರನೆಯ ವರ್ಷ ಕೆಲವು ರೈತರು ಮಿಶ್ರಬೆಳೆಯಾಗಿ ಮೆಸ್ತಾವನ್ನು ಬೆಳೆಯತೊಡಗಿದರು. ಮೂರನೆಯ ವರ್ಷದ ಅಂತ್ಯದಲ್ಲಿ ಸುಮಾರು ಏಳು ರೀತಿಯ ಹೊಸ ಬೆಳೆಗಳು ಕೃಷಿ ಪದ್ಧತಿಯಲ್ಲಿ ಸೇರಿಕೊಂಡವು.

ರೈತರು ಒಂದು ವಿಧದ ಜಾನುವಾರುಗಳ ಜೊತೆ ಮತ್ತೊಂದು ವಿಧದ ಜೋಡಣೆ ಪ್ರಾರಂಭಿಸಿದರು. ಉದಾಹರಣೆಗೆ ಹಸು ಮತ್ತು ಆಡು, ಹಸು ಮತ್ತು ಕೋಳಿ, ಆಡು ಮತ್ತು ಕೋಳಿ, ಜೊತೆಯಲ್ಲಿ ಟರ್ಕಿಕೋಳಿ ಸಾಕಲು ಸಹ ಪ್ರೋತ್ಸಾಹಿಸಲಾಯಿತು. ಹೀಗೆ ಹೆಚ್ಚಾದ ಜಾನುವಾರುಗಳಿಗೆ ಬೇಕಾದಷ್ಟು ಆಹಾರ ಒದಗಿಸಲು ಮೇವಿನ ಬೆಳೆಗಳ ಸೇರ್ಪಡೆ. ಮೊದಲ ವರ್ಷ ಸೆಣಬು ಹಾಗೂ ಅಜೋಲಾ. ಎರಡನೇ ವರ್ಷ ನೇಪಿಯರ್ ಹುಲ್ಲು, ಕುಂಬು ನೇಪಿಯರ್ ಹೈಬ್ರೀಡ್, ಹೆಡ್ಜೆ ಲೂಸರ್ನ್, ಲೂಸರ್ನ್, ಮೇವಿನ ಜೋಳ, ಸ್ಟೈಲೋ ಮತ್ತು ಕಾಲ್ಪಗೋನಿಯಂ ಮುಂತಾದವುಗಳನ್ನು ಬೆಳೆಯತೊಡಗಿದರು.

ಟೊಮೆಟೊ, ಬದನೆ, ಪಡುವಲ, ಬೆಂಡೆ, ಹಾಗಲ ಮತ್ತು ಗೋರಿಕಾಯಿ ಮುಂತಾದ ತರಕಾರಿಗಳು ಹಿತ್ತಲನ್ನು ತುಂಬಿಕೊಂಡವು. ಗ್ಲಿರಿಸೀಡಿಯಾ, ಮಾವು, ಚಿಕ್ಕು, ನೆಲ್ಲಿ, ಹುಣಸೆ ಮರಗಳು ಹೊಲಗಳಲ್ಲಿ ಮೊದಲೆರಡು ವರ್ಷಗಳಲ್ಲಿ ಸೇರಿದವು. ಮೂರನೆ ವರ್ಷ ಅಕೇಶಿಯಾ ಸೇರಿತು. ಉರುವಲು, ನಾಟಾ ಒದಗಿಸಿತು. ಜೊತೆಗೆ ಮೀನು ಸಾಕಾಣಿಕೆ, ಅಣಬೆ ಉತ್ಪಾದನೆ, ಗೊಬ್ಬರ ತಯಯಾರಿಕೆಗೆ ಬೈಯೋಡೈಜೆಸ್ಟರ್‌ಗಳು ಸೇರಿದವು. ಇವೆಲ್ಲಾ ಸಂಪನ್ಮೂಲಗಳ ಮರುಬಳಕೆಗೆ ಸಹಾಯಕವಾಗಿತ್ತು.

## ವೈವಿಧ್ಯಮಯ ಲಾಭಗಳು

ಬೆಳೆ ವೈವಿಧ್ಯದ ಹೆಚ್ಚಳದಿಂದಾಗಿ ಮೆಕ್ಕೆಜೋಳದ ಇಳುವರಿ ಮೊದಲವರ್ಷ ಶೇಕಡಾ 25ರಷ್ಟು ಹೆಚ್ಚಾಗಿರುವುದನ್ನು ರೈತರು ಅರಿತರು. ಎರಡನೇ ವರ್ಷ ಶೇಕಡಾ 15–25ರಷ್ಟು ಹೆಚ್ಚಾಗಿತ್ತು. ಆದರೆ ಮೂರನೇ ವರ್ಷ ಬೆಳೆಯ ಸಂದಿಗ್ಧ ಹಂತದಲ್ಲಿ ಮಳೆ ಬರದೇ ಮೆಕ್ಕೆಜೋಳದ ಇಳುವರಿ ಕಡಿಮೆಯಾಯಿತು. ಆದರೂ ಅವರು ಒಂದು ಎಕರೆಗೆ ಸುಮಾರು ಎರಡು ಸಾವಿರ ರೂಪಾಯಿಗಳಿಂದ ನಾಲ್ಕು ಸಾವಿರ ರೂಪಾಯಿಗಳವರೆಗೆ ಮಿಶ್ರಬೆಳೆ ಬೆಳೆದ ಕಾರಣ ಹೆಚ್ಚುವರಿ ಆದಾಯ ಪಡೆದರು. ಕುಂಠಿತ ಇಳುವರಿ ಗಮನಿಸಿದಾಗ, ಮಿಶ್ರಬೆಳೆಗಳಿಗೆ ಹೋಲಿಸಿದರೆ ಮೆಕ್ಕೆಜೋಳದ ಮೇಲಿನ ಬರದ ಪರಿಣಾಮ ಬಲವಾಗಿತ್ತು. ಮೆಕ್ಕೆಜೋಳವು ಹೂ ಬಿಡುವ ಮತ್ತು ಕಾಳುಗಟ್ಟುವ ಸಮಯದಲ್ಲಿ ತೇವಾಂಶದ ಒತ್ತಡವನ್ನು ತಡೆದುಕೊಳ್ಳದು. ಆದಾಯಕ್ಕೆ ಹೊರತಾಗಿ ದ್ವಿಧಳ ಧಾನ್ಯ ಬೆಳೆದಿದ್ದರಿಂದ ಪೌಷ್ಠಿಕಾಂಶದ ಕೊರತೆ ನೀಗಲು ಸಹಾಯಕವಾಯಿತು. ಕೃಷಿ ವೈವಿಧ್ಯ ಹೆಚ್ಚಳದಿಂದ ಸಂಪನ್ಮೂಲಗಳ ಪರಿಣಾಮಕಾರಿ ಬಳಕೆಯಾಯಿತು. ಹೊಲದ ಹಸುರು ಮೇವು ಜಾನುವಾರುಗಳಿಗೆ ತಿನಿಸು. ಮನೆಬಳಕೆಗೆ ಹಿತ್ತಲಿನ ತರಕಾರಿಗಳು, ಗಿಡದ ಕಡ್ಡಿಗಳು, ಉರುವಲು, ಕೃಷಿ ತ್ಯಾಜ್ಯಗಳು, ದರಕಲುಗಳು ಕಾಂಪೋಸ್ಟ್ ಅಗಿ ಪರಿವರ್ತನೆಯಾಗಿ ಮರಳಿ ಮಣ್ಣಿಗೆ, ದ್ವಿದಳ ಧಾನ್ಯಗಳ ಮಿಶ್ರ ಬೆಳೆಯು ಮಣ್ಣಿನ ಫಲವತ್ತತೆಯ ನಿರ್ಮಾಣಕ್ಕೆ ಸಹಾಯಕವಾಗಿತ್ತು.

ಮೇವಿನ ಕೊರತೆಯಿಂದಾಗಿ ರೈತರ ಬಳಿ ಕೇವಲ ಹಸು ಅಥವಾ ಆಡು ಅಥವಾ ಕೋಳಿ ಇರುತ್ತಿತ್ತು. ವಿವಿಧ ಮೂಲಗಳಿಂದ ಮೇವು ಲಭ್ಯವಾಗತೊಡಗಿದಾಗ ರೈತರು ಎರಡು–ಮೂರು ವಿಧಗಳ ಜಾನುವಾರು ಸಾಕಾಣಿಕೆಗೆ ತೊಡಗಿದರು. ಮೇವಿನ ಲಭ್ಯತೆಯಿಂದಾಗಿ ಒಂದು ವರ್ಷಕ್ಕೆ ಒಂದು ಜೊತೆ ಜಾನುವಾರುಗಳಿಂದ 2,740 ಲೀಟರ್‌ನಿಂದ 3,480 ಲೀಟರ್‌ಗೆ ಹಾಲಿನ ಇಳುವರಿ ಹೆಚ್ಚಿತು. ಹೀಗೆ ಕೃಷಿ ಕುಟುಂಬದ ಆದಾಯವು ಹೆಚ್ಚಿತು. ಮೆಕ್ಕೆಜೋಳದ ಮೌಲ್ಯವರ್ಧನೆಯಿಂದ ಸಿದ್ಧಗೊಂಡ ಜಾನುವಾರು ಮೇವು, ಅಜೋಲಾ ಹಾಗೂ ಇನ್ನಿತರ ಹಸಿರು ಮೇವುಗಳ ಸೇರ್ಪಡೆಯಿಂದ ಹೊರಗಿನ ಸಂಯೋಜಿತ ಆಹಾರದ ಖರೀದಿ ಕಡಿಮೆಯಾಯಿತು.

## ಬೆಂಬಲದ ನಂತರ

ರೈತ ಗುಂಪುಗಳು ಮಿಶ್ರಬೆಳೆ ಪದ್ಧತಿಯನ್ನು ಮುಂದುವರೆಸಿದ್ದಾರೆ. ಅವರೆಲ್ಲಾ ಕೃಷಿ ವಿಷಯಗಳನ್ನು ಚರ್ಚಿಸಲು ನಿರಂತರ ಸೇರುತ್ತಾರೆ. ಈಗ ಗುಂಪಾಗಿ ಕಲಿಯುವುದರಲ್ಲಿ ಉತ್ಸುಕರು. 'ಶ್ರೀ' ಪದ್ಧತಿಯಲ್ಲಿ ಭತ್ತ ಬೆಳೆಯುವುದನ್ನು ತಿಳಿದುಕೊಳ್ಳಲು ತಾವೇ ಸ್ವತಃ ಪುದುಕೋಟೈ ಜಿಲ್ಲೆಯ ಹಳ್ಳಿಯೊಂದರ ರೈತರ ಹೊಲಗಳಿಗೆ ಹೋಗಿದ್ದರು. ಜಾನುವಾರುಗಳು ಹಾಗೂ ಮೇವಿನ ಬೆಳೆಗಳ ಉತ್ಪಾದನೆ ಕುರಿತು ಹೆಚ್ಚಿನ ತಿಳುವಳಿಕೆ ಪಡೆಯಲು ನಮಕ್ಕಳ್ ಜಿಲ್ಲೆಯ ಪಶುವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಸಂಸ್ಥೆಗೆ ಭೇಟಿ ನೀಡಿದ್ದಾರೆ. ನಬಾರ್ಡ್ ಸಂಸ್ಥೆಯು ಈ ಗುಂಪುಗಳನ್ನು ರೈತ ಕೂಟಗಳೆಂದು ಪರಿಗಣಿಸಿದೆ. ರೈತರು ಕೃಷಿಯನ್ನು ವಿಭಿನ್ನ ಪರಿಕಲ್ಪನೆಯೊಂದಿಗೆ ನೋಡತೊಡಗಿದ್ದಾರೆ. ಹೊಸ ಸವಾಲುಗಳನ್ನು ಎದುರಿಸಲು ಹೆಚ್ಚಿನ ಆತ್ಮವಿಶ್ವಾಸ ಅವರ ಜೊತೆಗಿದೆ.


## ಕೃತಜ್ಞತೆಗಳು

- ಎಎಂಇಎಫ್ ತಂಡಕ್ಕೆ
- ಈ ಕಾರ್ಯಕ್ರಮ ಯಶಸ್ವಿಗೊಳಿಸಿದ ರೈತ ಗುಂಪುಗಳಿಗೆ, ಬಯೋಫಾರಂ ಮೂಲಕ ಬಡರೈತರ ಜೀವನಮಟ್ಟದ, ಸಂಪನ್ಮೂಲಗಳ ಅಭಿವೃದ್ಧಿಗಾಗಿ ಹಣಕಾಸಿನ ನೆರವು ನೀಡಿದ ಭಾರತ ಸರ್ಕಾರದ ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆಯ ಸೀಡ್ ವಿಭಾಗಕ್ಕೆ.



■ **N. Lalitha**
Area Project Officer

■ **J. Diraviam**
Area Unit Coordinator
AME Foundation, No.5/1299-B-2, NSCB Road,
Lakkiampatty,
Dharmapuri – 636705

E-mail: amef_dpi@yahoo.co.in

■ **Arun Balamatti**
Executive Director, AME Foundation, Bangalore.

E-mail: amefbang@yahoo.co.in



**ಆಂಗ್ಲ ಮೂಲ: ಲೀಸಾ ಇಂಡಿಯಾ, ಸಂಪುಟ 11, ಸಂಚಿಕೆ 1, ಮಾರ್ಚ್ 2009**

# ಆದಾಯ ಗಳಿಕೆಗೆ ಪರ್ಯಾಯ ಮಾರ್ಗ

■ ಶ್ರೀಕಾಂತ ಶೆಣೈ ಟಿ.ವಿ.

**ಕರ್ನಾಟಕದ ಲಕ್ಕವನಹಳ್ಳಿ ಹಾಗೂ ಸುತ್ತಲಿನ ಒಣಭೂಮಿ ರೈತರು ಅದಾಯ ಗಳಿಕೆಯಲ್ಲಿ ಪರ್ಯಾಯ ಮಾರ್ಗವನ್ನು ಕಂಡುಕೊಂಡಿದ್ದಾರೆ. ಆ ಪ್ರದೇಶದಲ್ಲಿರುವ ಸರ್ಕಾರೇತರ ಸಂಸ್ಥೆ ಐಡಿಎಫ್‌ನ ಮಧ್ಯಸ್ಥಿಕೆ ಹಾಗೂ ಪರ್ಯಾಯ ಚಟುವಟಿಕೆಗಳನ್ನು ಪರಿಚಯಿಸಿದ್ದರಿಂದಾಗಿ ಒಣಭೂಮಿ ರೈತರು ಪಟ್ಟಣಗಳಿಗೆ ಕೂಲಿಗಾಗಿ ವಲಸೆ ಹೋಗುವುದು ತಗ್ಗಿದೆ. ಈ ರೈತರು ಮೌಲ್ಯ ಸರಪಣಿಯ ಸಾಮರ್ಥ್ಯ ತಿಳಿದಿದ್ದಾರೆ. ಇದು ಅವರಿಗೆ ತಮ್ಮ ಉತ್ಪಾದನೆಗಳನ್ನು ಮಾರಲು, ತಮ್ಮ ಉದ್ಯಮಶೀಲ ಸಾಮರ್ಥ್ಯವನ್ನು ಚುರುಕುಗೊಳಿಸಲು, ವಲಸೆ ಕಡಿಮೆಯಾಗಲು ಸಹಾಯಕವಾಗಿದೆ.**

ನಮಗೀಗ ಭರವಸೆ ಬಂದಿದೆ. ಎರಡು ಹೊತ್ತಿನ ಊಟಕ್ಕಾಗಿ ನಾವು ಪಟ್ಟಣಕ್ಕೆ ವಲಸೆ ಹೋಗುವ ಅಗತ್ಯವಿಲ್ಲ. ಐದು ವರ್ಷಗಳ ಹಿಂದೆ ನಮಗೆ ವರ್ಷದಲ್ಲಿ ಹೆಚ್ಚೆಂದರೆ 60–70 ದಿನಗಳು ಕೆಲಸ ಸಿಗುತ್ತಿತ್ತು. ಈಗ ಕೂತಲ್ಲೇ 250 ರಿಂದ 300 ದಿನಗಳ ಕೆಲಸ ಮಾಡುತ್ತಿದ್ದೇವೆ. ನಮ್ಮ ಗಳಿಕೆ ದಿನಕ್ಕೆ 25 ರೂಪಾಯಿಗಳಿದ್ದದ್ದು 80ರಿಂದ 150 ರೂಪಾಯಿಗಳಿಗೇರಿದೆ. ಮೊದಲೆಲ್ಲಾ ದಾವಣಗೆರೆಯನ್ನು ದೊಡ್ಡನಗರವೆಂಬ ಭಯದ ಕಂಗಳಿಂದ ನೋಡುತ್ತಿದ್ದೆವು. ಈಗ ಅನೇಕ ನಗರಗಳನ್ನು ನೋಡಿದ್ದೇವೆ. ನನ್ನನ್ನು ದುಬೈ ಶಂಕರಮ್ಮ ಎಂದು ಕರೆಯುತ್ತಾರೆ. ಇನ್ನಿತರರು ಡೆಲ್ಲಿ, ಮುಂಬೈ, ಬೆಂಗಳೂರುಗಳಿಗೆ ಅನೇಕ ಬಾರಿ ಭೇಟಿ ಕೊಟ್ಟಿದ್ದಾರೆ. ನಾವೀಗ ನಮ್ಮ ಕನಸುಗಳನ್ನು ಫಲವತ್ತಾಗಿಸಿಕೊಳ್ಳಬಲ್ಲೆವು. ಈ ಸಣ್ಣ ಕನಸುಗಳನ್ನು ನನಸಾಗಿಸಿಕೊಳ್ಳಬಲ್ಲೆವು ಎಂಬ ವಿಶ್ವಾಸವೂ ನಮಗಿದೆ.

**– ದುಬೈ ಶಂಕರಮ್ಮ**

ಅಲ್ಲಿ ಉತ್ಸಾಹಕ್ಕೆ ಕೊನೆ ಎಂಬುದೇ ಇಲ್ಲವೆಂಬಂತೆ ಶಂಕರಮ್ಮನವರೊಂದಿಗೆ ಲಕ್ಕವನಹಳ್ಳಿ ಹಾಗೂ ಸುತ್ತಲಿನ ಹಳ್ಳಿಗಳ ಆಕೆಯ ಸಹೋದ್ಯೋಗಿಗಳು ಹಳ್ಳಿಯಲ್ಲಿರುವ ನೈಸರ್ಗಿಕ ನಾರು ಗುಂಪನ್ನು ನೋಡಲು ಬಂದ ವೀಕ್ಷಕರಿಗೆ ತಮ್ಮ ಅನುಭವಗಳನ್ನು ವಿವರಿಸುತ್ತಿದ್ದರು. ಅವರೆಲ್ಲಾ ಅರಳುತ್ತಿರುವ ನೈಸರ್ಗಿಕ ನಾರು ಗುಂಪಿನ ಸಕ್ರಿಯ ಸದಸ್ಯರು. ಕರ್ನಾಟಕದ ಚಿತ್ರದುರ್ಗ ಜಿಲ್ಲೆಯ ಹಿರಿಯೂರಿನ ಲಕ್ಕವನಹಳ್ಳಿ, ಕುಣೀಕೆರೆ, ಶೀಗೆಹಟ್ಟಿ, ಮಾಯಸಂದ್ರ, ಹುಚ್ಚವ್ವನ ಹಳ್ಳಿಗಳನ್ನೊಳಗೊಂಡ ಗೊಂಚಲು ಅದು. ಇವೆಲ್ಲಾ ಯಾವ ವರ್ಗಕ್ಕೂ ಸೇರದ ಹಳ್ಳಿಗಳು. ಹೆಚ್ಚಾಗಿ ಒಣಭೂಮಿ ಕೃಷಿಯನ್ನಾಧರಿಸಿವೆ. ರಾಗಿ ಮುಖ್ಯ ಏಕದಳ ಬೆಳೆ. ಒಂದು ಋತುವಿಗೆ ಮಾತ್ರ ಸೀಮಿತ. ಕೃಷಿ ಕೂಲಿ ಹೊರತುಪಡಿಸಿ ಕೆಲವೇ



ಚಿತ್ರಗಳು: ಐ ಡಿ ಎಫ್ ಫೌಂಡೇಶನ್

■ ಬುಟ್ಟಿಯನ್ನು ಹೆಣೆಯಲು ಮಹಿಳೆಯೊಬ್ಬಳು ತನ್ನ ಸಮಯ ಮತ್ತು . ಕೌಶಲ್ಯವನ್ನು ಬಳಸುತ್ತಿದ್ದಾಳೆ.

ಕೆಲವು ಆದಾಯ ಮೂಲಗಳಿವೆ. ಕುರಿ–ಆಡು ಸಾಕಣೆ ಮಾಡುವ ಕೃಷಿಕಾರ್ಮಿಕರ ಬಹುದೊಡ್ಡ ಸಂಖ್ಯೆ ಈ ಹಳ್ಳಿಗಳಲ್ಲಿದೆ. ಮುಖ್ಯಬೆಳೆ ಬೆಳೆದ (ಖಾರೀಫ್) ನಂತರ ನಗರಗಳಿಗೆ ಹಾಗೂ ನೀರಾವರಿ ಪ್ರದೇಶಗಳಿಗೆ ವಲಸೆ ಸಾಮಾನ್ಯ. ಈ ಹಳ್ಳಿಗಳಲ್ಲಿ ಕುಡಿಯುವ ನೀರು, ವಸತಿ, ಆರೋಗ್ಯಪಾಲನೆ, ವಾಹನಸಂಪರ್ಕ ಹೀಗೆ ಯಾವುದೇ ಮೂಲಸೌಕರ್ಯಗಳೂ ಇಲ್ಲ.

ಸರ್ಕಾರೇತರ ಸಂಸ್ಥೆ ಪ್ರಯೋಗ್ ಇಲ್ಲಿನ ಕೆಲವು ಬಡಮಹಿಳೆಯರನ್ನು ಸೇರಿಸಿ ಸ್ವಸಹಾಯ ಗುಂಪುಗಳನ್ನು ಪ್ರಾರಂಭಿಸಿತು. ಇದು ಭಾರತ ಸರ್ಕಾರ ಹಾಗೂ ಕರ್ನಾಟಕ ಸರ್ಕಾರವು ಇಸವಿ 2001ರಲ್ಲಿ ಯೋಜಿಸಿದ ಮಹಿಳಾ ಸಬಲೀಕರಣ ಯೋಜನೆಯಲ್ಲಾಗಿತ್ತು. ಎಲ್ಲಾ ಸ್ವಸಹಾಯ ಗುಂಪುಗಳಂತೆ ಈ ಗುಂಪೂ ಸಹ ತಮ್ಮದೇ ಸಾಮಾಜಿಕ, ಆರ್ಥಿಕ ಅಭ್ಯುದಯದ ಕುರಿತಾದ ದೃಷ್ಟಿಕೋನಗಳನ್ನು ಹಂಚಿಕೊಳ್ಳದೇ ಒಡೆದ ದಂಡೆಯಂತಾಯಿತು. ಸಭೆಗಳು ಹಾಗೂ ಉಳಿತಾಯಗಳು ಶಾಸ್ತ್ರದಂತೆ ನಡೆಯುತ್ತಿತ್ತು. ಇದರಿಂದ ಹಳ್ಳಿಯ ಮಹಿಳೆಯರ ಭರವಸೆಗಳು ಕುಸಿಯತೊಡಗಿದವು. ಇಸವಿ 2002ರಲ್ಲಿ ಇನ್ನೊಂದು ಸರ್ಕಾರೇತರ ಸಂಸ್ಥೆ ಐಡಿಎಫ್ ಈ ಗುಂಪುಗಳನ್ನು ಸ್ವೀಕರಿಸಿತು. ಇದು ಮಹಿಳೆಯರು ಸುಸ್ಥಿರ ಜೀವನೋಪಾಯ ಚಟುವಟಿಕೆಗಳನ್ನು ಒಬ್ಬಂಟಿಯಾಗಿ ಮಾಡದೇ ಗುಂಪಿನಲ್ಲಿ ಹೇಗೆ ಮಾಡಬಹುದೆಂಬುದನ್ನು ಶೋಧಿಸಿತು.

## ಸಹಭಾಗಿತ್ವದ ಅನ್ವೇಷಣೆ

ಮಹಿಳೆಯರಿಗೆ ಸರ್ಕಾರಿ ನೌಕರರ ಮೇಲೆ ಮತ್ತು ಸರ್ಕಾರೇತರ ಸಂಸ್ಥೆಗಳ ಮೇಲೆ ಕೊಂಚ ಮಾತ್ರ ನಂಬುಗೆ ಇತ್ತು. ನಾವಿಲ್ಲಿ ಬಂದಾಗ ವಿಶ್ವಾಸಯುತ ಸಂಬಂಧದ ನಿರ್ಮಾಣ ಬಲು ಕಷ್ಟದ್ದಾಗಿತ್ತು. ಆದಾಯ ಹೆಚ್ಚಿಸಲು ಸದಸ್ಯರು ಏನು ಮಾಡಬಲ್ಲರು ಅಥವಾ ಮಾಡುವುದಿಲ್ಲ ಎನ್ನುವ ಯಾವುದೇ ಯೋಜನೆಯು ನಮ್ಮಲ್ಲೂ ಇರಲಿಲ್ಲ. ಅವರೆಲ್ಲಾ ತಕ್ಷಣದಲ್ಲಿ ಆದಾಯ ಸಿಗುವಂತಹ ಕೆಲಸದ ಪರಿಹಾರಗಳನ್ನು ಬಯಸಿದ್ದರು. ಐಡಿಎಫ್‌ನ ಕಾರ್ಯಕಾರಿ ಟ್ರಸ್ಟಿಯಾದ ಶ್ರೀಕಾಂತ್ ಹೆಬ್ಬಾಳ ನೆನಪಿಸಿಕೊಳ್ಳುತ್ತಾರೆ. ಸ್ವಲ್ಪವೇ ಹಣಕಾಸಿನ ಮೂಲದೊಂದಿಗೆ, ಬಡಮಹಿಳೆಯರು, ಪ್ರಯೋಗಕ್ಕೆ ಮತ್ತು ಅಪಾಯ ಎದುರಿಸಲು ಒಲವು ತೋರಲಿಲ್ಲ.

## ಅಪಾಯ ತಗ್ಗಿಸುವ ರಚನೆ

ಐಡಿಎಫ್ ತಂಡವು ಸಹಭಾಗಿತ್ವ ಅಭಿವೃದ್ಧಿ ಕಾರ್ಯದ ಮೇಲೆ ಆರ್ಥಿಕ ಚಟುವಟಿಕೆಗಳ ಹೊಳಹುಗಳನ್ನು ಕೈಗೆತ್ತಿಕೊಂಡಿತು. ಒಂದು ಹಂತದ ಆರ್ಥಿಕ ಚಟುವಟಿಕೆಗಳನ್ನು ಗುರುತಿಸಿ ಚೌಕಟ್ಟೊಂದನ್ನು ಅಭಿವೃದ್ಧಿಪಡಿಸಿತು. ಹಳ್ಳಿಗರು ಆಯ್ದುಕೊಂಡ ಚಟುವಟಿಕೆಗಳು ಸ್ಥಳೀಯ ಸಂಪನ್ಮೂಲ ಅಥವಾ ಕೌಶಲ್ಯ ಆಧಾರಿತ ಸ್ಥಳೀಯ ಮಾರುಕಟ್ಟೆಯಲ್ಲಿ ಅಥವಾ ಮನೆಗಳಲ್ಲಿ ಮಾರಾಟ ಮಾಡಲು ಸೂಕ್ತವಾದ; ಕೃಷಿ ಕೆಲಸಗಳಿದ್ದಾಗ ಅಗತ್ಯವಾದರೆ ಅದನ್ನೂ ನಿರ್ವಹಿಸುತ್ತಾ ಇದನ್ನೂ ಮಾಡಬಲ್ಲಂತಹ; ಹೆಚ್ಚು ಮೂಲಧನವನ್ನು ಪ್ರಾರಂಭದಲ್ಲೇ ಬಯಸದ; ಏಕೆಂದರೆ ಒಂದೊಮ್ಮೆ ಮುಂದೆ ತೊಂದರೆಯಾದರೆ ನಷ್ಟವೂ ಕಡಿಮೆಯಾಗಿರುತ್ತದೆ. ಇವೆಲ್ಲಾ ಸಾಮಾನ್ಯ ಜ್ಞಾನದ ಹಿನ್ನೆಲೆಯ ಅಪಾಯ ತಗ್ಗಿಸುವ ಕೌಶಲ್ಯಗಳು.

## ಔದ್ಯಮಿಕ ಮನೋಭಾವನೆಯ ಅಭಿವೃದ್ಧಿ

ಪ್ರಾಥಮಿಕ ಆಹಾರ ಸಂಸ್ಕರಣೆಯಿಂದ ಹಿಡಿದು ತೆಂಗಿನ ಕಸಪೊರಕೆ ತಯಾರಿಕೆಯವರೆಗೆ ಅನೇಕ ಹೊಳಹುಗಳನ್ನು ಚರ್ಚಿಸಲಾಯಿತು ಮತ್ತು ಪರಿಶೀಲಿಸಲಾಯಿತು. ಒಂದೇ ಒಂದು ಚಟುವಟಿಕೆ ಆ ಪ್ರದೇಶಕ್ಕೆ ಹೊಸತಾಗಿತ್ತು; ನೈಸರ್ಗಿಕ ನಾರಿನ ಸಂಗ್ರಹ. ಈ ಹಳ್ಳಿಗಳಲ್ಲಿ ಅನೇಕ ಕುಟುಂಬಗಳು ಪಕ್ಕದ ಮಂಡ್ಯ ಹಾಗೂ ಮೈಸೂರು ಜಿಲ್ಲೆಗಳಿಗೆ ಋತುಮಾನದಲ್ಲೊಮ್ಮೆ ವಲಸೆ ಹೋಗುತ್ತಾರೆ. ಅಲ್ಲಿ **"ಆಪು"** [Typha grass] ಎಂದು ಸ್ಥಳೀಯ ಹೆಸರಿನ ನೀರುಹುಲ್ಲನ್ನು ಸಂಗ್ರಹಿಸುತ್ತಾರೆ. ಉದ್ದ ಬೆಳೆದ ಹುಲ್ಲನ್ನು ಕತ್ತರಿಸಿ, ಹೊರೆಕಟ್ಟಿ, ಎತ್ತಿನಗಾಡಿಗಳಲ್ಲಿ ಊರಿಗೆ ತರುತ್ತಾರೆ. ಇಲ್ಲಿ ಸೂರ್ಯನ ಬಿಸಿಲು ಅಧಿಕ. ಅತ್ಯಧಿಕ ಉಷ್ಣಾಂಶವು ಉತ್ತಮ ಸಂಪನ್ಮೂಲ. ಹುಲ್ಲಿನ ಕಡ್ಡಿಗಳನ್ನು ಬಿಸಿಲಿನಲ್ಲಿ ಒಣಗಿಸಿ ಸಣ್ಣ ಎಳೆಯಾಗಿ ತಿರುಪುತ್ತಾರೆ. ಅವನ್ನೆಲ್ಲಾ ಕಟ್ಟಿ ಹಿರಿಯೂರು ಪಟ್ಟಣದಲ್ಲಿ ಮಾರುತ್ತಾರೆ. ಇವನ್ನು ರೈತರು ಹಾಗೂ ವ್ಯಾಪಾರಿಗಳು ಕೊಳ್ಳುತ್ತಾರೆ. ವೀಳ್ಯದೆಲೆಬಳ್ಳಿಯನ್ನು ಮರಕ್ಕೆ ಅಥವಾ ಕೊಂಬೆಗೆ ಕಟ್ಟಲು ಬಳಕೆ. ಇವು ಮೃದು ಹಾಗೂ ನಯವಾಗಿರುತ್ತದೆ. ಆಪು ಎಳೆಗಳು ಬಳ್ಳಿಯನ್ನು ಸರಿಯಾಗಿ ಬಿಗಿ ಹಿಡಿದಿಟ್ಟುಕೊಳ್ಳುತ್ತವೆ. ಕಾಂಡವನ್ನು ಕತ್ತರಿಸದೇ ಬಳ್ಳಿಯು ಹಬ್ಬಲು ಕಾರಣವಾಗುತ್ತದೆ. ಇವು ಪ್ಲಾಸ್ಟಿಕ್ ದಾರಕ್ಕೆ ಪರ್ಯಾಯವಾದ, ಜೈವಿಕವಾಗಿ ಕೊಳೆಯುವ ದಾರಗಳು.

ಆಪು ನಾರನ್ನು ಬಳಸಿ ಕಾಲೊರಸು, ಬ್ಯಾಸ್ಕೆಟ್ ಮುಂತಾದ ಉಪಯುಕ್ತ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸುವ ಹೊಳಹನ್ನು ಐಡಿಎಫ್ ನೀಡಿತು. ಐಡಿಎಫ್ ನೆಟ್‌ವರ್ಕ್‌ನಲ್ಲಿರುವ ಟೆಕ್ಸ್‌ಟೈಲ್ ಇಂಜಿನಿಯರ್ ಆದ ಆನಂದ್ ಧಾರವಾಡ್‌ಕರ್‌ರವರು ಈ ಹುಲ್ಲಿನಿಂದ ಮತ್ತು ಬಾಳೆಮರದಿಂದ ನೈಸರ್ಗಿಕವಾಗಿ ನಾರನ್ನು ಹೇಗೆ ತೆಗೆಯುವುದೆಂದು ತೋರಿಸಿದರು. ಇವುಗಳ ನಾರನ್ನು ನೇರವಾಗಿ ಅಥವಾ ಇತರ ನೈಸರ್ಗಿಕ ನಾರುಗಳೊಂದಿಗೆ ಬೆರೆಸಿದರೆ ಕೈಗಾರಿಕಾ ಉತ್ಪಾದನೆಗಳಿಗೆ ಸೂಕ್ತವೆಂದು ತಿಳಿಯಿತು. ಸಂಗ್ರಹಿಸಿದ ನಾರನ್ನು ಹೆಣೆದು, ಸುತ್ತಿಟ್ಟುಕೊಂಡರೆ ಕೈಗಾರಿಕೆಗಳಿಗೆ ಅಥವಾ ಉತ್ತಮ ಗುಣಮಟ್ಟದ ಕಾಗದ ತಯಾರಿಕೆಗೆ ಬಳಕೆ ಮಾಡಬಹುದು. ಒಣಗಿದ ಹುಲ್ಲನ್ನು ಉದ್ದುದ್ದವಾಗಿ ತಿರುಪಿ ಐದರಿಂದ ಹತ್ತು ಅಗಲದ ರಿಬ್ಬನ್‌ಗಳಂತೆ ಮಾಡಿಕೊಂಡು ಹೊಸೆದು ಒಂದು ರೀತಿಯ ಹಾಸಿನಂತೆ ಬಣ್ಣದ ದಪ್ಪ ಸುರುಳಿಯಂತೆ ಮಾಡಿ ಚಾಪೆ ಹೆಣೆಯಲು ಬಳಸಬಹುದು.

ಸುರುಳಿಗೆ ಸುಲಭವಾಗಿ ಮೂಲಬಣ್ಣಗಳನ್ನು, ನೇರವಾಗಿ ಬಣ್ಣಗಳನ್ನು ಹಚ್ಚಬಹುದು. ಈ ನಾರಿನಿಂದ ಮಾಡಿದ ಉತ್ಪಾದನೆಯು ಸಂಪೂರ್ಣ ಜೈವಿಕವಾಗಿ ಕೊಳೆಯುವಂತಹುದು. ಸೌಂದರ್ಯಪ್ರಜ್ಞೆ ಇರುವ ಜನರು ಇದರ ವಿಭಿನ್ನವಾದ ವಿನ್ಯಾಸವನ್ನು ತುಂಬಾ ಮೆಚ್ಚಿಕೊಳ್ಳುತ್ತಾರೆ.

ಆದ್ದರಿಂದ ಸಾಂಘಿಕ ಉದ್ಯಮದ ಕಲ್ಪನೆಯಲ್ಲಿ ಸಂಘಟನೆಯು ಅಂತಹ ಸಿದ್ಧಪಡಿಸಿದ ನಾರನ್ನು ಕೊಂಡು ಮತ್ತಷ್ಟು ನೇಯ್ದು ಅನೇಕ ಕರಕುಶಲ ಕೈಗಾರಿಕೆಗಳನ್ನು ಮಾಡಬಹುದು. ಇದಕ್ಕೆ ಹಾಕಿದ ಕೂಲಿ ಕೆಲಸದ ಆದಾಯವೂ ಸಿಗುವುದೋ ಇಲ್ಲವೋ ಎಂಬ ಅನುಮಾನ ಮಹಿಳಾ ಸದಸ್ಯರದು.

## ಚಟುವಟಿಕೆಯ ಕಲ್ಪನೆ

ಆತ್ಮೀಯ ಮನವೊಲಿಕೆಯೊಂದಿಗೆ, ಐಡಿಎಫ್ ತಂಡವು 16 ಮಹಿಳೆಯರ ಒಂದು ತಂಡವನ್ನು ಸಂಘಟಿಸಿತು. ಆಪುವಿನಿಂದ ನಾರನ್ನು ಸಂಗ್ರಹಿಸುವುದು, ನಂತರ ಬಾಳೆಯ ಕಾಂಡದ ಬಳಕೆ. ಸದಸ್ಯರು ತಮ್ಮ ಉಳಿತಾಯದ ಮತ್ತು ಸಣ್ಣ ಸಾಲ ಮಾಡಿದ ಹಣದಿಂದ ಚರಕವನ್ನು ಕೊಂಡರು.

ಉತ್ಪಾದನೆಯು ಅಸಮರ್ಪಕವಾಗಿತ್ತು. ಸದಸ್ಯರಿಗೆ ಹಾಗೂ ಐಡಿಎಫ್ ಕ್ಷೇತ್ರ ತಂಡಕ್ಕೆ ಹೆಚ್ಚು ಕಾಲ ಉತ್ಸಾಹವಿರಲಿಲ್ಲ. ಉತ್ಪಾದನೆಯಾದ ಹೆಚ್ಚಿನ ನಾರು ಸರಿಯಿಲ್ಲದೇ ಕಡಿಮೆ ಸಾಂದ್ರತೆಯಿಂದಾಗಿ ತ್ಯಜಿಸಲಾಯಿತು. ಸ್ವಲ್ಪ ಭಾಗ ಮುರಿದರೂ ಆದಾಯ ಅತ್ಯಂತ ಕಡಿಮೆಯಾಗಿತ್ತು. ಕೇವಲ ನಾಲ್ಕು ಜನ ಪಟ್ಟು ಹಿಡಿದು ಸಾಧಿಸಿದರೂ, ಅವರ ಗಳಿಕೆ ದಿನಕ್ಕೆ ಎಂಟು ರೂಪಾಯಿಗಳಿಗೂ ಕಡಿಮೆಯಿತ್ತು. ಅದರ ಬದಲು ದಿನಕ್ಕೆ 20 ರೂಪಾಯಿಗಳಾದರೂ ಕೂಲಿ ಸಿಕ್ಕಿದ್ದರೆ ಆಗುತ್ತಿತ್ತು. ಹಳ್ಳಿಯಲ್ಲಿ ಬಾಳೆಕಾಂಡ ಸಿಗುತ್ತಿರಲಿಲ್ಲ. 10–15 ಕಿಲೋಮೀಟರ್ ದೂರದ ನೀರಾವರಿ ಪ್ರದೇಶಕ್ಕೆ ಹೋಗಿ

■ **'ಆಪು' ಹುಲ್ಲಿನಿಂದ ನಾರು ತೆಗೆಯುತ್ತಿರುವ ಮಹಿಳೆಯರು.**



ಕೊಯ್ಲಿನ ಸಮಯ ನೋಡಿ ತರಬೇಕಾಗಿತ್ತು. ನಾರಿನ ಸಂಗ್ರಹವು – ಒಂಭತ್ತು ತಿಂಗಳು ತೆಗೆದುಕೊಂಡಿತು ಮೌಲ್ಯ ಸರಪಣಿಯ ಕೊನೆಯ ತುದಿಯ ಬಹಳ ಸಾಂಕೇತಿಕ ಚಟುವಟಿಕೆ. ಈ ಚಟುವಟಿಕೆ ಮುಗಿಯುವವರೆಗೆ ಸುಮಾರು ಅಳಿಸಿ ಹೋದಂತಾಗಿತ್ತು.

## ಮೌಲ್ಯವರ್ಧನೆಯ ಸಾಮರ್ಥ್ಯ

ಐಡಿಎಫ್ ತಂಡದ ಅಧ್ಯಯನ ತೋರಿಸಿದ್ದೇನೆಂದರೆ ನೈಸರ್ಗಿಕ ನಾರಿನ ಮೌಲ್ಯವರ್ಧಿತ ನಿತ್ಯಬಳಕೆಯ ಉತ್ಪನ್ನಗಳಿಗೆ ಕಾಸ್ಮೋಪಾಲಿಟನ್ ನಗರಗಳಲ್ಲಿ ಅಧಿಕ ಮಾರುಕಟ್ಟೆ ಮೌಲ್ಯವಿದೆ. ಮೊದಲ ಹೆಜ್ಜೆಯಾಗಿ, ಗ್ರಾಮೀಣ ಮಹಿಳೆಯರನ್ನು ಚಲನಶೀಲರನ್ನಾಗಿಸಬೇಕು. ಮೌಲ್ಯ ಸರಪಣಿಯ ಪ್ರತಿ ಕೊಂಡಿಯನ್ನೂ ದಾಟಿ ಮಾರಾಟಯೋಗ್ಯ ಉತ್ಪಾದನೆಯನ್ನಾಗಿಸುವ ಕೌಶಲ್ಯ ಒದಗಿಸಬೇಕು. ಐಡಿಎಫ್ ಪಟ್ಟು ಹಿಡಿದು ಸಂಘಟಿಸಿ, ಪಾಂಡುರಂಗ ವಾಲಿಯವರನ್ನು ನೇಮಿಸಿತು. ಇವರು ಕುಶಲಕರ್ಮಿಗಳು. ಮಹಿಳೆಯರಿಗೆ ಹಳ್ಳಿಯಲ್ಲಿ ತಯಾರಿಸಲಾದ ನಾರನ್ನು ನೇಯುವುದನ್ನು ಕಲಿಸಿದರು. ಹೊಸ ಕೌಶಲ್ಯವನ್ನು ಕಲಿಯಲು, ಗುಂಪನ್ನು ಬಿಟ್ಟ ಮಹಿಳೆಯರೂ ಸಹ ಕುತೂಲಹದಿಂದ ಸೇರಿಕೊಂಡರು. ಸರ್ಕಾರಿ ತರಬೇತಿ ಕೇಂದ್ರದಿಂದ ನಿಷ್ಕ್ರಿಯ ನೇಯ್ಗೆ ಉಪಕರಣಗಳನ್ನು ಸಾಲ ತಂದು ದುರಸ್ತಿ ಮಾಡಿಸಿದರು. ಅಲ್ಲದೆ ನೇಯ್ಗೆ ತರಬೇತಿಯನ್ನು ಸಹ ಪಡೆದುಕೊಂಡರು.

ಯಾವ ಮಹಿಳೆಯರಿಗೂ ಈ ಹಿಂದೆ ನೇಯ್ಗೆ ಮಾಡಿದ ಅನುಭವವಿರಲಿಲ್ಲ. ಮೊದಲ ಉತ್ಪಾದನೆ ಒರಟಾಗಿತ್ತು. ಅದು ಅವರಿಗೆ ತಾವು ಹೊಸ ಆರ್ಥಿಕ ಚಟುವಟಿಕೆ ಮಾಡಬಲ್ಲೆವು ಎಂಬ ವಿಶ್ವಾಸ ತಂದಿತು. ಹೊಸ ಕೌಶಲ್ಯ ಪಡೆದುಕೊಂಡದ್ದು ಹಾಗೂ ನೇಯ್ಗೆ ಯಂತ್ರಗಳು ಅವರಿಗೆ ಸಾಮಾಜಿಕ ಪ್ರತಿಷ್ಠೆಯ ವಿಷಯವಾಗಿತ್ತು ಮತ್ತು ಗೌರವದ ಮೂಲವಾಗಿತ್ತು. ಕಾರಣ ಅವರಲ್ಲಿ ಹೆಚ್ಚಿನ ಮಹಿಳೆಯರು ದಲಿತ ಸಮುದಾಯದಿಂದ ಬಂದವರಾಗಿದ್ದರು. ಅವರನ್ನು ಕೂಲಿಗಳು ಎನ್ನುವುದಕ್ಕಿಂತ ಕುಶಲಕರ್ಮಿಗಳು ಎನ್ನುವ ಹೊಸ ಗುರುತು ಹೆಮ್ಮೆಯದಾಗಿತ್ತು. ಮೇಲ್ಮುಖ ಸಾಮಾಜಿಕ ಚಲನೆಗೆ ಒಂದು ಮೂಲವಿದು.

## ಬ್ಯಾಂಕ್‌ನವರ ನಂಬಿಕೆ

ಉತ್ಪಾದಕ ಮಹಿಳೆಯರ ಉತ್ಸಾಹಕ್ಕೆ ಪ್ರತಿಕ್ರಿಯಿಸಿದ, ಚಿತ್ರದುರ್ಗ ಗ್ರಾಮೀಣ ಬ್ಯಾಂಕ್ 2.5 ಲಕ್ಷ ರೂಪಾಯಿಗಳ ಸಬ್ಸಿಡಿಸಹಿತ ಸಾಲವನ್ನು ಇಸವಿ 2004ರಲ್ಲಿ ಗುಂಪಿಗೆ ಬಿಡುಗಡೆ ಮಾಡಿತು. ಗುಂಪು ಖಾಲಿ ಇದ್ದ ಶೆಡ್‌ವೊಂದನ್ನು ಬಾಡಿಗೆಗೆ ಪಡೆಯಿತು. ವಾರ್ಷಿಕ ಸಾಂಘಿಕ ಗಳಿಕೆ 25 ಸಾವಿರ ರೂಪಾಯಿಗಳಿಗೂ ಕಡಿಮೆಯಿತ್ತು. ನಬಾರ್ಡ್ ಬ್ಯಾಂಕ್ ಗುಂಪಿನ ಅಭಿವೃದ್ಧಿಗೆ ಅವಕಾಶ ನೀಡಿ ಗೌರವಿಸಿತು ಮತ್ತು ಚಟುವಟಿಕೆಗಳನ್ನು ಪ್ರೋತ್ಸಾಹಿಸಿತು.

## ತಿರುವು

ಉತ್ಪಾದನೆಗಳು ಸರಳವಾಗಿದ್ದು ಬೆಂಗಳೂರಿನ ಕೆಲವು ವಿನ್ಯಾಸಕಾರರು ಖರೀದಿಸಿದರು. ಐಡಿಎಫ್ ತಾನೊಂದು ಎನ್‌ಜಿಓ ಆಗಿ ಉತ್ಪಾದನೆಗಳ ಮಾರಾಟಕ್ಕೆ ಸಹಾಯ ಮಾಡಲು ಸಾಧ್ಯವಿಲ್ಲ ಎಂಬುದನ್ನು ತಿಳಿಯಿತು. ರಾಜ್ಯ ಸರ್ಕಾರವು ಸಹ ಸ್ವಸಹಾಯ ಗುಂಪುಗಳು ಮತ್ತು ಕುಶಲವಸ್ತುಗಳ ಉತ್ಪಾದನೆಗಳಿಗೋಸ್ಕರ ಸಮುದಾಯ ಆಳ್ವಿಕೆಯ ಮಾರುಕಟ್ಟೆ ಸಂಘಟನೆ ಎಂಬ ಕಲ್ಪನೆಯನ್ನು ಮುಂದುವರೆಸಲಿಲ್ಲ. ಆದ್ದರಿಂದ ಐಡಿಎಫ್‌ನ್ನು ಪ್ರೋತ್ಸಾಹಿಸುವ ಕಂಪನಿಯಾದ ಗ್ರಾಮ್ಯದ ಜೊತೆಗೂಡಿಸಲಾಯಿತು. ಇದೊಂದು ತಳಮಟ್ಟದ ಸಮುದಾಯಗಳ ಉತ್ಪಾದನೆಗಳ




ಮಾರಾಟಕ್ಕೋಸ್ಕರವೇ ಮೀಸಲಿರುವ ಕಂಪೆನಿ.

ಗ್ರಾಮ್ಯವು ಅನೇಕ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮಾರಾಟ ಮೇಳಗಳಲ್ಲಿ ಉತ್ಪಾದಕ ಮಹಿಳೆಯರಿಗೆ ಭಾಗವಹಿಸಲು ಹಾಗೂ ಉತ್ಪಾದನೆಗಳನ್ನು ಪ್ರದರ್ಶಿಸಲು ಅನುಕೂಲ ಒದಗಿಸಿತು. ಫ್ಯಾಬ್ ಇಂಡಿಯಾದಂತಹ ಪ್ರಮುಖ ಮಾರಾಟ ಸಂಸ್ಥೆಗಳು ಸರಳ ಉತ್ಪಾದನೆಗಳನ್ನು ಗಮನಿಸಿದವು. ಇಸವಿ 2006ರಲ್ಲಿ ಐದು ಲಕ್ಷ ರೂಪಾಯಿಗಳ ಆದೇಶ ನೀಡಿದರು. ಇದು ಉತ್ಪಾದಕ ಮಹಿಳೆಯರ ನೈತಿಕ ಸ್ಥಿತಿಯನ್ನು ಮೇಲಕ್ಕೇರಿಸಿತು.

## ನೈಸರ್ಗಿಕ ನಾರು ಗುಂಪಿನ ಹುಟ್ಟು

ಲಕ್ಕವನಹಳ್ಳಿ ನೈಸರ್ಗಿಕ ನಾರು ಆಧಾರಿತ ಗುಂಪಿನ ಕೇಂದ್ರ. ಐಡಿಎಫ್ ಮತ್ತು ಗ್ರಾಮ್ಯದ ಜಾಲ ಮತ್ತು ಸಂಬಂಧಗಳು ಪತ್ರಿಕೆಗಳಿಂದಾಗಿ ಹೆಚ್ಚು ಕಾಣಿಸುವಂತಾಯಿತು. ಸ್ಥಳೀಯ ಮತ್ತು ರಾಜ್ಯ ಸರ್ಕಾರ, ಎನ್‌ಜಿಓಗಳು, ಬ್ಯಾಂಕ್‌ಗಳು ವೀಕ್ಷಕರನ್ನು ಕರೆದು ತಂದವು. ಗುಂಪು ಉದ್ಯಮವನ್ನು ವಿಸ್ತರಿಸಲು ಪ್ರಾರಂಭಿಸಿದಾಗ, ಹೆಚ್ಚು ಮಹಿಳೆಯರು ಹಾಗೂ ಹಳ್ಳಿಗರು ಸೇರಿಕೊಂಡರು. ನಿರಂತರ ಕೆಲಸ, ಆದಾಯ ಪಡೆಯುವವರೊಂದಿಗೆ ಪಟ್ಟಣದ ಜನರೊಂದಿಗೆ ಕಲೆತು ಸಾಮಾಜಿಕ ಗೌರವವನ್ನೂ ಪಡೆದರು. ಯುನೈಟೆಡ್ ಸ್ಟೇಟ್‌ನ ಯುವ ನಾಗರಿಕಳು ಮತ್ತು ಇಂಡಸ್ ಕಾರ್ಪ್‌ನ ಫೆಲೋ ಆದ ಲಿಂಡಾಮಣಿಯವರು ಉತ್ಪಾದಕ ಮಹಿಳೆಯರೊಂದಿಗೆ ಒಂದು ವರ್ಷಕ್ಕೂ ಹೆಚ್ಚು ಕಾಲ ನೆಲೆಸಿದರು. ಅರಳುತ್ತಿರುವ ಉದ್ಯಮದ ಬಗ್ಗೆ ತಿಳಿಯುವುದು ಮತ್ತು ಮಹಿಳೆಯರಿಗೆ ಅವರದೇ ಆದ ದೃಷ್ಟಿಕೋನವನ್ನು ಹೊಂದಲು ಸಹಾಯ ಮಾಡಿದರು.

## ಏರಿದ ಮೌಲ್ಯ ಸರಪಣಿ

ಹಳ್ಳಿಯಲ್ಲಿ ನಡೆದ ಅನೇಕ ಕೌಶಲ್ಯ ಮತ್ತು ವಿನ್ಯಾಸ ಅಭಿವೃದ್ಧಿ ಶಿಬಿರಗಳಲ್ಲಿ ಭಾಗವಹಿಸುವ ಮೂಲಕ ಹೆಚ್ಚುವರಿ ಕೌಶಲ್ಯ, ಅನುಭವಗಳನ್ನು ಮಹಿಳೆಯರು ಪಡೆದರು. ವಿವಿಧ ಶಿಬಿರಗಳಿಗೆ ಹಾಗೂ ಕಲಿಕಾ ಸಂದರ್ಶನಗಳಿಗೆ ಭಾರತ ಸರ್ಕಾರದ ಅಂಬೇಡ್ಕರ್ ಹಸ್ತಶಿಲ್ಪ ಯೋಜನೆ ಮತ್ತು ನಬಾರ್ಡ್ ಗುಂಪು ಅಭಿವೃದ್ಧಿ ಕಾರ್ಯಕ್ರಮಗಳು ಭಾಗಶಃ ವೆಚ್ಚದ ಸಹಾಯ ನೀಡಿ ಕೈಜೋಡಿಸಿತು. ವಿಶಾಲ ಮನೋಭಾವದ ವಿನ್ಯಾಸಗಾರರು ತೊಡಗಿಸಿಕೊಂಡಿದ್ದರಿಂದ ಮೂಲ ಉತ್ಪನ್ನಗಳಲ್ಲಿ ವೈವಿಧ್ಯ ಹಾಗೂ ಸೌಂದರ್ಯ ಹೊಮ್ಮಿತು. ಅವರು ನವ ಕುಶಲಕರ್ಮಿಗಳ ಮಾರುಕಟ್ಟೆ ಪ್ರಜ್ಞೆ, ಪಾರಿಸರಿಕ ಹಾಗೂ ಸೌಂದರ್ಯಪ್ರಜ್ಞೆಯ ಸಾಮರ್ಥ್ಯವನ್ನು ಅಭಿವೃದ್ಧಿಪಡಿಸಿದರು.

ಇಂಗ್ಲೆಂಡಿನಿಂದ ಹಿಂದಿರುಗಿದ ವಿನ್ಯಾಸಗಾರ್ತಿ, ಈ ಚಟುವಟಿಕೆಗಳಲ್ಲಿ ಮನಃಪೂರ್ವಕ ತೊಡಗಿಸಿಕೊಂಡ ಸವಿತಾ ಪಾರೀಖ್ ಹೇಳುತ್ತಾರೆ. "ಈ ನೈಸರ್ಗಿಕ ನಾರಿನ ಸ್ಪರ್ಶ ಮತ್ತು ನೋಟಕ್ಕೆ ನಾನು ಮರುಳಾದೆ. ಅವು ಹಳ್ಳಿಯ ಸೊಗಡಿನ, ಪರಿಸರಸ್ನೇಹಿ ಮತ್ತು ತುಂಬಾ ಸಮಕಾಲೀನವಾಗಿತ್ತು. ಇವನ್ನು ನೆಮ್ಮದಿಯ ಜೀವನಕ್ಕಾಗಿ ಹೋರಾಡುವ ತಳವರ್ಗದ ಮಹಿಳೆಯರು ಉತ್ಪಾದಿಸಿದ್ದರು. ವನವಾಸಿ ಉತ್ಸವವೊಂದರಲ್ಲಿ ಈ ಉತ್ಪಾದಕ ಮಹಿಳೆಯರನ್ನು ಭೇಟಿ ಮಾಡಿದೆ. ಈ ವಿಕಸಿಸುತ್ತಿರುವ ಉದ್ಯಮಿಗಳ ಗುಂಪಿಗೆ ವಿನ್ಯಾಸದ ಅಭಿವೃದ್ಧಿ ಹಾಗೂ ಮಾರುಕಟ್ಟೆ ಸಂಪರ್ಕ ದೊರಕಿಸಿಕೊಡುವಲ್ಲಿ ಮೌಲ್ಯಯುತ ಕೊಡುಗೆ ನೀಡಬೇಕೆಂಬ ನಿರ್ಧಾರ ಮಾಡಿದೆ". ಸವಿತಾ ಬೆಂಗಳೂರು ಮೂಲದ ವಿನ್ಯಾಸಗಾರ ರಾಜಶೇಖರ ನಾರಾಯಣರ ಜೊತೆಗೂಡಿದರು. ಐಡಿಎಫ್ ಮತ್ತು ಗ್ರಾಮ್ಯ ತಂಡಕ್ಕೆ ವಿವಿಧ ರೀತಿಯ ನೈಸರ್ಗಿಕ ನಾರುಗಳ ಮಿಶ್ರಣಗಳ ಸಮಕಾಲೀನ ಉತ್ಪಾದನೆಗಳ ಅಭಿವೃದ್ಧಿ ಮಾಡಿದರು. ಅವುಗಳು ಪ್ರಮುಖವಾಗಿ ಕಾರ್ಪೊರೇಟ್ ಗಿಫ್ಟ್‌ಗಳು ಹಾಗೂ ಪ್ಯಾಕೇಜಿಂಗ್‌ಗಳಾಗಿ ಮಾರುಕಟ್ಟೆ ಸೇರಿದವು.

## ವಿಸ್ತರಣೆ

ಮೂಲ ಉತ್ಪನ್ನಗಳು ಸಾಮಾನ್ಯ ಎಳೆಯಿಂದ ವಿಸ್ತರಿಸಿ ಸೌಂದರ್ಯಯುತ ಚಂದದ ಕೈಕೆಲಸಗಳಿಂದ ಕೂಡಿದ ಉಪಯುಕ್ತ ಕುಶಲ ವಸ್ತುಗಳಾದವು. ಚಾಪೆಗಳು, ಬಾಗಿಲು ಪರದೆಗಳು, ಯೋಗಚಾಪೆಗಳು, ಫೈಲ್, ಫೋಲ್ಡರ್‌ಗಳು, ಊಟದಲ್ಲಿ ಬಳಸುವ ಚಾಪೆಗಳು, ಕೋಸ್ಟರ್‌ಗಳು, ದಿಂಬಿನ ಕವರ್‌ಗಳು, ಬೆಡ್‌ಸ್ಪ್ರೆಡ್‌ಗಳು, ಲ್ಯಾಂಪ್‌ಶೇಡ್‌ಗಳು ಹೀಗೆ ವೈವಿಧ್ಯಮಯ ಉತ್ಪನ್ನಗಳಾದವು. ಈಗ ಮೌಲ್ಯ ಸರಪಳಿಯಲ್ಲಿ 152 ಮಹಿಳೆಯರು ಸಕ್ರಿಯವಾಗಿ ಬೇರೆ ಬೇರೆ ಹಂತದ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಅಲ್ಲೀಗ ಕಾರ್ಯ ನಿರ್ವಹಿಸುತ್ತಿರುವ 25 ನೇಯ್ಗೆ ಯಂತ್ರಗಳಿವೆ. 72 ಮಹಿಳೆಯರು ಈ ಸಾಹಸಕ್ಕೆ ತೊಡಗಿದ್ದಾರೆ. ಮೌಲ್ಯ ಸರಪಳಿಯ ಕನಿಷ್ಠ ಕಲಿಕೆಯಾದ ಉತ್ಪಾದನೆಯ ಮೂಲ ವಿಷಯಗಳನ್ನು ಕಲಿಯುತ್ತಿದ್ದಾರೆ. ಇಸವಿ 2008ರಲ್ಲಿ ಉದ್ಯಮಿಗಳ ಗುಂಪು ಸಾಂಘಿಕವಾಗಿ 30 ಲಕ್ಷ ರೂಪಾಯಿಗಳಷ್ಟು ಉತ್ಪನ್ನಗಳನ್ನು ಮಾರಾಟ ಮಾಡಿದೆ. ಎಲ್ಲಾ ಉತ್ಪಾದಕ ಸದಸ್ಯರು ಈಗ ಫ್ಯಾಬ್ ಇಂಡಿಯಾದ ಒಂದು ಉಪಸಂಸ್ಥೆಯಾದ ಡೆಕ್ಕನ್ ಕ್ರಾಫ್ಟ್ಸ್ ಮತ್ತು ವೀವರ್ಸ್ ಪ್ರೈವೇಟ್ ಲಿಮಿಟೆಡ್‌ನ ಶೇರುದಾರರು. ಎಲ್ಲರಿಗೂ ಈಗ ವಿಮಾ ಸೌಲಭ್ಯವಿದೆ. ಐಡಿಎಫ್ ಹಣಕಾಸು ಸೇವೆಯಲ್ಲಿ ಅಗತ್ಯ ಆಧಾರಿತ ಸೂಕ್ಷ್ಮ ಹಣಕಾಸು ಸೇವೆಗಳು ಸಿಗುವಂತೆ ಮಾಡಿದೆ. ನಿರ್ಮಾಣ ಸಾಲಗಳನ್ನು ಅವರದೇ ಸ್ವಂತ ಶೆಡ್, ಕಛೇರಿ ಅಭಿವೃದ್ಧಿಗೆ ಮತ್ತು ದುಡಿಮೆಯ ಬಂಡವಾಳ ಪೂರೈಕೆಗೆ ಮಹಿಳಾ ಸದಸ್ಯರಿಗೆ ನೀಡುತ್ತಿದೆ. ಉತ್ಪಾದಕ ಮಹಿಳೆಯರಿಂದ ಬಂಡವಾಳದ ಭಾಗದೊಂದಿಗೆ ಸೋಲಾರ್ ಲೈಟಿಂಗ್ ಸಿಸ್ಟಂಗೂ ಜಾಗ ಕಲ್ಪಿಸಲಾಗಿದೆ.

## ಕೃಷಿಯ ಮೇಲಾದ ಪರಿಣಾಮ

ಈ ಎಲ್ಲಾ ಅಭಿವೃದ್ಧಿಗಳು ಹೇಗೇ ಆಗಲಿ ಸದ್ಯದ ಚಿಕಿತ್ಸಕ ಅಳತೆಯಲ್ಲಿ ಈ ಹಳ್ಳಿಗರ ಕೃಷಿ ಚಟುವಟಿಕೆಗಳ ಮೇಲೆ ಅಡ್ಡ ಪರಿಣಾಮ ಬೀರಲಿಲ್ಲ. ಅನೇಕ ಮಹಿಳೆಯರು ಕೃಷಿ ಕೂಲಿಗಳಾಗಿ ನೆಟ್ಟಿ ಹಾಗೂ ಕೊಯ್ಲಿನ ಸಮಯದಲ್ಲಿ ಈಗಲೂ ಕೆಲಸ ಮಾಡುತ್ತಾರೆ. ಕೃಷಿಯು ಅವರ ಸಾಮಾಜಿಕ ಆರ್ಥಿಕ ಸಂಸ್ಕೃತಿಯಲ್ಲಿ ಒಂದು ಭಾಗವಾಗಿದೆ.

ಮಹಿಳೆಯರಲ್ಲಿ ಹುಟ್ಟಿದ ಹೊಸ ವಿಶ್ವಾಸವು ಆರ್ಥಿಕ ಶಕ್ತಿಯನ್ನು ಹೊಂದಿದ್ದರಿಂದಾಗಿಯೊಂದೇ ಅಲ್ಲ. ಆದರೆ ಸಾಮಾಜಿಕ ಸಬಲತೆಯಿಂದಾಗಿ ಕೃಷಿ ಆರ್ಥಿಕತೆ ಮತ್ತು ಸ್ಥಳೀಯ ಮೂಲ ಸೌಕರ್ಯಗಳ ಮೇಲೆ ಪರೋಕ್ಷ ಪರಿಣಾಮ ತಂದಿತು. ಬಾಳೆ ಕೃಷಿಕರು ಈಗ ಬಾಳೆಮರಗಳನ್ನು ಉಚಿತವಾಗಿ ನೀಡುತ್ತಿಲ್ಲ. ಮಹಿಳೆಯರು ಕೊಳ್ಳಬೇಕಾಗಿದೆ. ನಾರನ್ನು ತೆಗೆದ ಮೇಲೆ ಉಳಿಯುವ ತ್ಯಾಜ್ಯವನ್ನು ಎರೆಹುಳು ಗೊಬ್ಬರವಾಗಿ ಮಾಡಬಹುದೆಂದು ಹಳ್ಳಿಗರು ತಿಳಿದಿದ್ದಾರೆ. ಹಳ್ಳಿಯು ಗುಂಪಿನ ಕೇಂದ್ರವಾಗಿ ಅಭಿವೃದ್ಧಿಯಾದ್ದರಿಂದ ನಿರುದ್ಯೋಗಿ ಯುವಕರು ರಿಕ್ಷಾ ಓಡಿಸುವುದು, ಟೆಲಿಫೋನ್ ಬೂತ್, ಸಣ್ಣ ತಿಂಡಿತಾಣ ಮತ್ತು ಚಿಕ್ಕಮಳಿಗೆಗಳು ಇತ್ಯಾದಿ ಸರಿದೂಗಿಸಬಹುದಾದ ಸ್ವಯಂ ಉದ್ಯೋಗವನ್ನು ಕಂಡುಕೊಂಡಿದ್ದಾರೆ.

## ಮುಂದಿರುವ ಸವಾಲುಗಳು

ಬಡಮಹಿಳೆಯರ ಸುಸ್ಥಿರ ಜೀವನಮಟ್ಟದ ಅನ್ವೇಷಣೆಯ ಪಯಣದಲ್ಲಿ ಅಡ್ಡಬರುವ/ ಮುಂದಿರುವ ಸವಾಲುಗಳ ಬಗ್ಗೆ ಐಡಿಎಫ್–ಗ್ರಾಮ್ಯ ತಂಡವು ತುಂಬಾ ಎಚ್ಚರಿಕೆಯಿಂದಿವೆ. ಗುಂಪು ಉದ್ದಿಮೆದಾರರನ್ನು ಸಾಂಸ್ಥೀಕರಣಗೊಳಿಸುವಿಕೆ. ವಿವಿಧ ಸುತ್ತಿನ ಉದ್ಯಮಶೀಲತಾ ಚಟುವಟಿಕೆಗಳನ್ನು ಸಮುದಾಯದ ಒಡೆತನಕ್ಕೆ ಒಳಪಡಿಸುವಿಕೆ. ಪ್ರಮುಖವಾಗಿ ಸೂಕ್ಷ್ಮ ವ್ಯತ್ಯಾಸಗಳನ್ನು ಸೊಗಸುಗೊಳಿಸುವಿಕೆ. ಉತ್ಪನ್ನಗಳನ್ನು ದೂರದ ಮಾರುಕಟ್ಟೆ ಮಾಡುವಿಕೆ. ಆರ್ಥಿಕ ಅಪಾಯಗಳ ನಿರ್ವಹಣೆಗಳು ಮುಂದಿರುವ ಬಹುದೊಡ್ಡ ಸವಾಲುಗಳು. ಮೌಲ್ಯ ಸರಪಳಿಯ ವಿವಿಧ ಚಟುವಟಿಕೆಗಳಲ್ಲಿ ನಿರ್ದಿಷ್ಟ ಗುಂಪುಗಳು ತಜ್ಞತೆ ಪಡೆದಿವೆ. ಗುಂಪಿನ ಸದೃಢ ಒಗ್ಗಟ್ಟಿಗೋಸ್ಕರ ಕೇಂದ್ರೀಕೃತ ಶ್ರಮದ ಅಗತ್ಯವಿದೆ. ಒಣಭೂಮಿ ಕೃಷಿ ಸಂಸ್ಕೃತಿಯೊಂದಿಗೆ ಪ್ರಶಂಸನೀಯ ಚಟುವಟಿಕೆಯಾಗಿ ಕಾರ್ಯ ನಿರ್ವಹಿಸಬೇಕಾಗಿದೆ. ಅನ್ಯಥಾ ಕೂಲಿ ಕೊರತೆಯಿಂದ ನಷ್ಟವಾಗಬಹುದು.

ಬಡಮಹಿಳೆಯರಿಗೆ ಚಟುವಟಿಕೆಗಳಿಂದಾಗುವ ಸ್ಪಷ್ಟತೆ ಹಾಗೂ ಲಾಭಗಳಿಗಾಗಿ, ಪ್ರಾರಂಭದಲ್ಲಿ ಮಾಡುವ ಲೇವಡಿಗಳನ್ನು ಸಹಿಸಿಕೊಳ್ಳಬೇಕು. ಕೊನೆಯಲ್ಲಿ ನಾಯಕತ್ವಕ್ಕಾಗಿ ಹಕ್ಕು ಸಾಧಿಸಲು ಬರುವ ಕ್ಷುಲ್ಲಕ ರಾಜಕಾರಣಿಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ಎಲ್ಲಾ ಸುತ್ತಿನ ಆರ್ಥಿಕ ಚಟುವಟಿಕೆಗಳ ಸದೃಢ ಸಮುದಾಯ ಒಡೆತನದಿಂದ ಮಾತ್ರ ಸಾಧ್ಯ.

■ **Srikantha Shenoy TV**
Executive Trustee
Initiatives for Development Foundation
141/A, Usha, 25th Cross, II Block
Rajaji Nagar, Bengaluru 560 010
Karnataka, India

Website: www.idfdevelopment.org

E-mail: idfbangalore@gmail.com

**ಆಂಗ್ಲ ಮೂಲ: ಲೀಸಾ ಇಂಡಿಯಾ, ಸಂಪುಟ 11, ಸಂಚಿಕೆ 2, ಜೂನ್ 2009**

# ಸರಳ ಒಲೆ ಕಟ್ಟಿಕೊಟ್ಟ ಬದುಕು

■ ಆರ್.ಪ್ರಭಾ

**ನವೀಕರಿಸಬಹುದಾದ ಶಕ್ತಿ, ಆಹಾರ ಸಂಸ್ಕರಣೆ ಮತ್ತು ಸುಸ್ಥಿರ ಕೃಷಿಕ್ಷೇತ್ರಗಳಲ್ಲಿ ಆದಾಯವರ್ಧನೆಗೋಸ್ಕರ ಸೂಕ್ತ ತಂತ್ರಜ್ಞಾನಗಳನ್ನು ಅಳವಡಿಸಬಹುದಾದ ಹೊಸ ಮಾರ್ಗಗಳನ್ನು ಗ್ರಾಮೀಣ ಮಹಿಳೆಯರು ಕಂಡುಕೊಂಡಿದ್ದಾರೆ. ಅನ್ವಯಿತ ತಂತ್ರಜ್ಞಾನಗಳು ಸಾಮರ್ಥ್ಯ ನಿರ್ಮಾಣವನ್ನು ದ್ವಿಗುಣಗೊಳಿಸಿ ಅವರ ವಿಶ್ವಾಸದ ಮಟ್ಟ ಮತ್ತು ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯವನ್ನು ಉತ್ತೇಜಿಸುತ್ತದೆ.**

ಮಹಿಳೆಯರು ಕುಟುಂಬದೊಳಗೆ ಹಾಗೂ ಸಮಾಜದಲ್ಲಿ ಅನೇಕ ಪಾತ್ರಗಳನ್ನು ನಿರ್ವಹಿಸಬೇಕಾಗುತ್ತದೆ. ಈ ಪಾತ್ರಗಳಿಗೆ ಹಾಗೂ ಜವಾಬ್ದಾರಿಗಳಿಗೆ ಪ್ರತಿಕ್ರಿಯೆಯಾಗಿ, ಬದಲಾವಣೆಗಳನ್ನು ಸೂಚಿಸುವ ಆಕೆಯ ಪ್ರಾಯೋಗಿಕ ಹಾಗೂ ಫಲಾತ್ಮಕ ಅಗತ್ಯಗಳು, ಕೌಶಲ್ಯಯುತ ಆಸಕ್ತಿಗಳು ನಿರ್ಣಾಯಕ. ಆಕೆಯ ಸಾಧನೆಗೋಸ್ಕರ ಬದಲಾವಣೆಗಳಿಗೆ ತಾಂತ್ರಿಕತೆಯು ಸಿಗುವಂತೆ ದೊರಕಿಸಿಕೊಡುವುದು ವಿಶೇಷವಾಗಿ ಮಹಿಳಾ ಸಬಲತೆಯ ವಿಷಯದಲ್ಲಿ ಸಾಮಾಜಿಕ ಪರಿವರ್ತನಾ ಮಾರ್ಗವಾಗಿದೆ.

ಖಿಖಆಇ ಲಾಭಕ್ಕೋಸ್ಕರವಲ್ಲದ, ವಿವಿಧ ಕಾರ್ಯಯೋಜನೆಗಳ ಮೂಲಕ ಸುಸ್ಥಿರ ಅಭಿವೃದ್ಧಿಗೋಸ್ಕರ ವಚನಬದ್ಧವಾಗಿರುವ ಸಂಘಟನೆ. ತಂತ್ರಜ್ಞಾನ ಅಭಿವೃದ್ಧಿ, ಜಾಗೃತಿ ಮೂಡಿಸುವಿಕೆ, ತಾಂತ್ರಿಕ ಹಾಗೂ ಔದ್ಯಮಿಕ ತರಬೇತಿ, ಆದಾಯ ಉತ್ಪನ್ನ ಚಟುವಟಿಕೆಗಳನ್ನು ಕಲಿಸುವಿಕೆ ಮತ್ತು ಪರಿಚಯಿಸುವಿಕೆ ಸೇರಿದೆ. ನವೀಕರಿಸಬಹುದಾದ ಶಕ್ತಿ, ಆಹಾರ ಸಂಸ್ಕರಣೆ ಹಾಗೂ ಸುಸ್ಥಿರ ಕೃಷಿ ಕ್ಷೇತ್ರದಲ್ಲಿ ಸೂಕ್ತ ತಂತ್ರಜ್ಞಾನ ಅಳವಡಿಸುವುದರ ಮೂಲಕ ಕರ್ನಾಟಕ ಹಾಗೂ ಕೇರಳದ ಮಹಿಳೆಯರಿಗೆ ಅವರ ಅದಾಯ ವರ್ಧಿಸುವಲ್ಲಿ ಸಹಾಯಕವಾಗಿದೆ. ಯಾರಿಗಾಗಿ ವಿನ್ಯಾಸಗೊಳಿಸಲಾಗುವುದೋ ಅವರಿಗೆ ಲಾಭವಾಗುವಂತಹ ತಂತ್ರಜ್ಞಾನಗಳನ್ನು ಮಹಿಳೆಯರಿಗೆ ಪರಿಚಯಿಸುವುದರ ಮೂಲಕ ಗ್ರಾಮೀಣ ಸಮುದಾಯಗಳ ಬದಲಾವಣೆಯ ಪಾತ್ರವಾಗಿ ಟೈಡ್ ನಿರ್ವಹಿಸುತ್ತಿದೆ. ಬೆಂಬಲದ ಅಗತ್ಯವಿರುವ ಮಹಿಳೆಯರನ್ನು ಗುರುತಿಸುವುದಕ್ಕಾಗಿ ನೆಲಮೂಲದ ಸರ್ಕಾರೇತರ ಸಂಸ್ಥೆಗಳೊಂದಿಗೆ ಕೆಲಸ ಮಾಡುತ್ತದೆ.

ಆಯ್ಕೆಯಾದ ತಂತ್ರಜ್ಞಾನವು ಮಹಿಳೆಯರಿಗೆ ಒಪ್ಪುವಂತಿರಬೇಕು. ಪರಂಪರಾಗತವಾಗಿ ನಿರ್ವಹಿಸಿದ ಚಟುವಟಿಕೆಗಳಂತಿರಬೇಕು ಮತ್ತು ಕಲಿಯಲು ಕಷ್ಟಕರವಾಗಿರಬಾರದು. ಮಹಿಳೆಯರು ತರಬೇತಿಯಲ್ಲಿ ಈಗಾಗಲೇ ಪೂರೈಸಿರುವ ಅನೇಕ ಚಟುವಟಿಕೆಗಳನ್ನೂ ಪರಂಪರಾಗತ ವಿಧಾನಗಳನ್ನು ಬಳಸಿ ನೀಡಲಾಗಿದೆ. ಉದಾಹರಣೆಗೆ ಆಹಾರ ಪದಾರ್ಥಗಳನ್ನು ಬಿಸಿಲಿನಲ್ಲಿ ಒಣಗಿಸುವಿಕೆ. ಇದು ಮಹಿಳೆಯರು ಅನೇಕ ವರ್ಷಗಳಿಂದ ಮಾಡುತ್ತಿರುವ ಕೆಲಸ. ಜೈವಿಕ ತ್ಯಾಜ್ಯಗಳನ್ನು ಆಧರಿಸಿದ ಡ್ರೈಯರ್‌ಗಳನ್ನು ಮಹಿಳೆಯರಿಗೆ ಟೈಡ್ ಪರಿಚಯಿಸಿತು. ಕಡಿಮೆ ಸಮಯದಲ್ಲಿ ಸ್ವಚ್ಛ ಹಾಗೂ ಉತ್ತಮ ಗುಣಮಟ್ಟದ ಒಣ ಆಹಾರ ಉತ್ಪಾದನೆಗೆ ಇದು ಸಹಾಯಕ. ಅಧಿಕ ವೆಚ್ಚವಿಲ್ಲ. ಮನೆಯೊಳಗೆ ಇಡಬಹುದಾದ ಹೊಗೆರಹಿತ ಒಲೆಗಳು, ಗೇರುಬೀಜ ಸಂಸ್ಕರಣೆ, ಹಸುರುಮನೆ ಇತ್ಯಾದಿಗಳು ಆದಾಯ ವರ್ಧನೆಗೆ ಮಹಿಳೆಯರು ಬಳಸುತ್ತಿರುವ ಇನ್ನಿತರ ಉದಾಹರಣೆಗಳು. ಪ್ರಸ್ತುತ ಟೈಡ್‌ನ ವಿವಿಧ ಜೀವನೋಪಾಯ ಚಟುವಟಿಕೆಗಳಲ್ಲಿ ಸುಮಾರು 60 ಮಹಿಳೆಯರು ತೊಡಗಿಸಿಕೊಂಡಿದ್ದಾರೆ. ಇಸವಿ 2003ರಿಂದ 2009ರವರೆಗಿನ ಅವರ ಸಂಗ್ರಹಿತ ಆದಾಯ 14 ಲಕ್ಷ ದಾಟಿದೆ. ಈ ಲೇಖನದಲ್ಲಿ ಹೊಗೆರಹಿತ ಒಲೆಗಳು ಹಾಗೂ ಜೈವಿಕ ತ್ಯಾಜ್ಯ ಆಧಾರಿತ ಡ್ರೈಯರ್‌ಗಳನ್ನು ಉತ್ತೇಜಿಸಿದ ಅನುಭವಗಳನ್ನು ವಿವರಿಸಲಾಗಿದೆ.

### ಹೊಗೆರಹಿತ ಒಲೆಗಳು

ಹಳೆಯಕಾಲದ ಒಲೆಗಳು ವಿಪರೀತ ಹೊಗೆಯುಗುಳುತ್ತಾ ಮನೆಯೊಳಗಿನ ವಾಯುಮಾಲಿನ್ಯ ಹಾಗೂ ಆರೋಗ್ಯದ ಸಮಸ್ಯೆಗಳಿಗೆ ಕಾರಣವಾಗಿತ್ತು. ಮಹಿಳೆಯರ ಅಗತ್ಯಗಳನ್ನು ಮತ್ತು ನಿರೀಕ್ಷೆಗಳನ್ನು ಉತ್ತಮವಾಗಿ ಅರ್ಥೈಸಿಕೊಂಡ ಒಂದು ಅಡುಗೆ ಒಲೆಯು ಮಹಿಳೆಯರ ಮಧ್ಯದ ಸಂವಹನವಾಗಿ ಎಂದಿನಿಂದಲೂ ಅದು ಬಹಳ ಪರಿಣಾಮಕಾರಿ, ಒಲೆ ನಿರ್ಮಿಸುವಿಕೆಯು ಮಹಿಳೆಯರಿಗೋಸ್ಕರ ಆದಾಯ ಹೆಚ್ಚಿಸುವ ಒಂದು ಆದರ್ಶಮಯ ಚಟುವಟಿಕೆ ಎಂದು ನಂಬಲಾಗಿದೆ.

ಹೊಗೆರಹಿತ ಒಲೆಗಳನ್ನು ಪರಿಚಯಿಸುವ ಮೊದಲು ಒಂದು ಒಲೆಯಿಂದ ಮಹಿಳೆಗೆ ಏನೆಲ್ಲಾ ಅಗತ್ಯಗಳಿವೆ ಎಂಬ ಅಧ್ಯಯನವನ್ನು ಟೈಡ್ ಏರ್ಪಡಿಸಿತ್ತು. ಅದರ ಆಧಾರದ ಮೇಲೆ ಮನೆಬಳಕೆಯ ಹೊಗೆರಹಿತ ಒಲೆಗಳಿಗೋಸ್ಕರ ಎಲ್ಲಿ ಮಹಿಳೆಯರು ಬದಲಾವಣೆಯ ಕಾರ್ಯಕರ್ತರಾಗಿದ್ದರೋ ಅಲ್ಲಿ ವಿಸ್ತೃತ ಕೌಶಲ್ಯಗಳನ್ನು ಅಭಿವೃದ್ಧಿಪಡಿಸಿತು. ಒಲೆ ಉದ್ಯಮಿಗಳಾಗಿ ಮಹಿಳೆಯರನ್ನೇ ಮಾಡಿದ ಕಾರಣ ಹಲವು; ಮನೆಬಳಕೆಯ ಒಲೆ ಬಳಸುವವರು; ತಮ್ಮ ಅಗತ್ಯಗಳ ಕುರಿತು ಮುಕ್ತವಾಗಿ ಹಾಗೂ ನಿರ್ದಿಷ್ಟವಾಗಿ ಇತರ ಮಹಿಳೆಯೊಂದಿಗೆ ಹೇಳಿಕೊಳ್ಳಬಲ್ಲವರು; ಸ್ಥಳೀಯ ಸಾಮರ್ಥ್ಯಗಳ ನಿರ್ಮಾಣಕ್ಕೆ ಮಹಿಳೆಯರೇ ಅಗತ್ಯ.

ಇಸವಿ 2003ರಲ್ಲಿ ಸರಳ ಒಲೆ ಕಟ್ಟುವ ತರಬೇತಿಯನ್ನು ಟೈಡ್ ಮಹಿಳೆಯರಿಗೆ ನೀಡಿತು. ಇದರ ವಿನ್ಯಾಸ ಭಾರತೀಯ ವಿಜ್ಞಾನ

### ಸರಳ ಒಲೆ

**ಸರಳ ಒಲೆ : ಹೆಸರೇ ಹೇಳುವಂತೆ ಕಟ್ಟುವುದೂ ಸುಲಭ. ಎರಡು ಪಾತ್ರೆಗಳನ್ನು ಒಮ್ಮೆಲೇ ಇಡಬಹುದಾದ ಒಲೆ. ಒಂದು ಉರುವಲು ದ್ವಾರ. ಇನ್ನೊಂದು ಹೊಗೆಕಿಂಡಿ. ಇದನ್ನು ಕಟ್ಟಲು ಅಚ್ಚನ್ನು ಬಳಸಲಾಗುತ್ತದೆ. ಹೀಗಾಗಿ ವಿನ್ಯಾಸ ಬದಲಾಗದು. ಕಾರ್ಯಕ್ಷಮತೆಯೂ ಬದಲಾಗದು. ಸ್ಥಳೀಯವಾಗಿ ಸಿಗುವ ವಸ್ತುಗಳ ಬಳಕೆ. ಮಣ್ಣು ಹಾಗೂ ಇಟ್ಟಿಗೆಗಳು ಅತ್ಯಗತ್ಯ. ಜೈವಿಕ ತ್ಯಾಜ್ಯಗಳನ್ನು ಉರುವಲಾಗಿ ಬಳಸಿದಾಗ ಉಂಟಾಗುವ ಹೊಗೆಯು ಅಡಿಗೆಮನೆಯೊಳಗೆ ಬರದೇ ಹೊಗೆಕಿಂಡಿಯ ಮೂಲಕ ಹೊರಹೋಗುವುದನ್ನು ವಿನ್ಯಾಸವೇ ಖಚಿತ ಭರವಸೆ ನೀಡುತ್ತದೆ. ಇದು ಒಳಾಂಗಣ ವಾಯುಮಾಲಿನ್ಯವನ್ನು ಕಡಿಮೆ ಮಾಡುತ್ತದೆ. ಉರಿಯುವಿಕೆಯ ಕಾರ್ಯ ಸಾಮರ್ಥ್ಯ ಹಾಗೂ ಅಡುಗೆ ಮನೆಗೆ ಹೊಗೆ ಬಾರದಂತೆ ತಡೆಯುವಿಕೆಯನ್ನೊಳಗೊಂಡೇ ಒಲೆಯನ್ನು ವಿನ್ಯಾಸಗೊಳಿಸಲಾಗಿದೆ. ಅಚ್ಚಿನ ಬಳಕೆಯು ಒಲೆಯ ಆಕಾರ ದೃಢವಾಗಿರುವಂತೆ ಭರವಸೆ ನೀಡುತ್ತದೆ.**

## ಲಲಿತಾಬಾಯಿ

ಇದು ತುಮಕೂರು ಜಿಲ್ಲೆಯ ಎಚ್. ಮುದ್ದೇನಹಳ್ಳಿ ತಾಂಡ್ಯದ ಲಲಿತಾಬಾಯಿಯವರ ಯಶೋಗಾಥೆ. ಆಕೆಗೆ ಈಗ 47 ವರ್ಷ. ವೃತ್ತಿ ಕೃಷಿಕೂಲಿ. ಕೃಷಿದಿನಗಳು ಮುಗಿದಾಗ ಹಳ್ಳಿಗೆ ಹತ್ತಿರದ ಕಲ್ಲುಕ್ವಾರಿಯಲ್ಲಿ ಕೆಲಸ. ಇಸವಿ 2002ರಲ್ಲಿ ತಿಪಟೂರಿನ ಬೈಫ್ ಮೂಲಕ ಟ್ರೈಡ್ ತರಬೇತಿಯಲ್ಲಿ ಸರಳ ಒಲೆ ನಿರ್ಮಿಸುವುದನ್ನು ಕಲಿತರು. ಒಲೆಯೊಂದಕ್ಕೆ 200 ರೂಪಾಯಿಗಳ ಖರ್ಚು. ಸಣ್ಣ ಹಳ್ಳಿಗಳ ಅತ್ಯಂತ ಬಡವರೂ ಇಷ್ಟು ಖರ್ಚುಮಾಡಬಲ್ಲರು ಎಂಬುದನ್ನು ಆಕೆ ಅರಿತರು. ಈ ಒಲೆಗಳನ್ನು ನಿರ್ಮಿಸಿ ಆದಾಯ ಗಳಿಸಬಹುದೆಂಬ ತೀರ್ಮಾನ. ಅದರೊಂದಿಗೆ ತನ್ನಂತ ಮಹಿಳೆಯರಿಗೆ ಕೆಲಸವೂ ಕಡಿಮೆಯಾಗುತ್ತದೆ ಮತ್ತು ಆರೋಗ್ಯವೂ ವೃದ್ಧಿಸುತ್ತದೆ ಎಂಬುದನ್ನು ತಿಳಿದರು. ಹೀಗೆ ಉದ್ಯಮಶೀಲತೆಯ ಪ್ರಾರಂಭ. ಕೃಷಿಕೂಲಿ ಅಥವಾ ಕ್ವಾರಿ ಕೂಲಿಗಿಂತಲೂ ಎರಡು ಪಟ್ಟು ಆದಾಯವನ್ನೂ ಗಳಿಸಬಹುದೆಂದು ತಿಳಿಯಿತು. ಇದು ಆಕೆಗೆ ಮುಖ್ಯವಾಗಿತ್ತು. ಮಗಳನ್ನು ಓದಿಸಿ ಶಿಕ್ಷಕಿಯನ್ನಾಗಿ ಮಾಡಬೇಕೆಂಬುದು ಆಕೆಯ ಗುರಿ. ಒಲೆಗಳನ್ನು ನಿರ್ಮಿಸಲು ತಿಪಟೂರು ತಾಲ್ಲೂಕಿನಿಂದ ಧಾರವಾಡ ಜಿಲ್ಲೆಯ ಹಳ್ಳಿಗಳಿಗೆ ಪ್ರಯಾಣಿಸಿದರು. [ಸುಮಾರು 400 ಕಿಲೋಮೀಟರ್ ಅಂತರ. ಉಳಿದೆಲ್ಲಾ ಮಹಿಳೆಯರಂತೆ ಅಕೆಗೂ ಕೌಟುಂಬಿಕ ಜವಾಬ್ದಾರಿಗಳಿದ್ದವು. ಮಗಳಿಗೋಸ್ಕರ ಇಟ್ಟ ಗುರಿಯು ಆಕೆಗೆ ಬೇಕಾದಷ್ಟು ಪ್ರೇರೇಪಣೆ ನೀಡುತ್ತಿತ್ತು. ಒಲೆ ನಿರ್ಮಿಸುವಿಕೆಯು ಈ ಜವಾಬ್ದಾರಿಗಳಿಗೆ ಎದುರಾಗದಂತೆ ಆಕೆ ನಿರ್ವಹಿಸಿದರು. ಎರಡೇ ವರ್ಷಗಳಲ್ಲಿ 50,000 ಗಳಿಕೆ. ಇದು ಆಕೆಯ ಮಗಳು ಶಿಕ್ಷಕ ತರಬೇತಿ ಅವಧಿ ಮುಗಿಸಿ ಸರ್ಕಾರಿ ಶಾಲೆಯಲ್ಲಿ ಶಿಕ್ಷಕಿಯಾಗಿ ಸೇರಿಕೊಳ್ಳಲು ಸಾಧ್ಯವಾಯಿತು.

ಆಕೆಯ ಶ್ರಮವನ್ನು ಪರಿಗಣಿಸಿ, ಸೂಕ್ಷ್ಮ ಉದ್ಯಮಶೀಲರಿಗೋಸ್ಕರ ಇರುವ "ವುಮೆನ್ ಎಕ್ಸೆಂಪ್ಲಾರ್ ಅವಾರ್ಡ್" 2007ನ್ನು ಭಾರತೀಯ ಉದ್ಯಮ ಒಕ್ಕೂಟ ಮತ್ತು ಭರ್ತಿ ಫೌಂಡೇಶನ್ ಲಲಿತಾಬಾಯಿಯವರಿಗೆ ನೀಡಿದೆ.

ಲಲಿತಾಬಾಯಿ ಈಗಲೂ ಒಲೆಗಳನ್ನು ನಿರ್ಮಿಸುತ್ತಿದ್ದಾರೆ. ಇಸವಿ 2009ರಲ್ಲಿಯೇ ಅವುಗಳ ಸಂಖ್ಯೆ 3,000 ದಾಟಿದೆ. ಗಳಿಕೆ ಎರಡು ಲಕ್ಷ ದಾಟಿದೆ. ಆಕೆಯ ಯಶಸ್ಸು ಒಲೆ ನಿರ್ಮಾಣ ಕೌಶಲ್ಯವನ್ನಷ್ಟೇ ಅವಲಂಬಿಸಿಲ್ಲ. ಬಳಕೆದಾರರ ಅಗತ್ಯಗಳನ್ನು ಅರ್ಥಮಾಡಿಕೊಂಡು ನಿರ್ಮಿಸುವ ರೀತಿಯನ್ನೂ ಅವಲಂಬಿಸಿದೆ. ಇದು ಆಕೆಗೆ ಖ್ಯಾತಿಯನ್ನು ಗಳಿಸಿಕೊಟ್ಟಿದೆ. ಇದರಿಂದ ತಾನು ಒಲೆ ನಿರ್ಮಿಸುವವಳು ಎಂದು ಹೇಳಿಕೊಳ್ಳಬೇಕಾದ ಅಗತ್ಯವಿಲ್ಲ. ಬೇಡಿಕೆಗಳು ಆಕೆಯನ್ನು ಹುಡುಕಿಕೊಂಡು ಬರುತ್ತವೆ. ಟ್ರೈಡ್‌ನ ಒಲೆ ನಿರ್ಮಿಸುವ ಎಲ್ಲಾ ತರಬೇತಿ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಾರೆ. ಇತರ ಮಹಿಳೆಯರನ್ನು ಒಲೆ ನಿರ್ಮಿಸುವಿಕೆ ಕಲಿಯಲು ಹಾಗೂ ಉದ್ಯಮಶೀಲರಾಗಲು ಪ್ರೋತ್ಸಾಹಿಸುತ್ತಾರೆ. ಹೀಗಾಗಿ ಅವರೆಲ್ಲಾ ಆಕೆಯನ್ನು ಇಷ್ಟಪಡುತ್ತಾರೆ ಎನಿಸುತ್ತದೆ.

## ಶ್ರೀದೇವಿ ಮುಖೇಶ್

ಕೇರಳದ ತ್ರಿಶೂರು ಜಿಲ್ಲೆಯ ಅನಾಪುರ್ಝಾ ವಾಸಿ ಶ್ರೀದೇವಿ ಮುಖೇಶ್ ಇಂದು ಬಹುದೊಡ್ಡ ಮಹಿಳೆ. 35ರ ಹರೆಯದ ಆಕೆಯ ಉದ್ಯಮ ಹಾಗೂ ಜೈವಿಕ ತ್ಯಾಜ್ಯ ಡ್ರೈಯರ್ ಬಳಸಿ ಒಣ ಸೀಗಡಿ ಹಾಗೂ ಮೀನು ತಯಾರಿಸುತ್ತಿರುವ ಸಾಹಸಕ್ಕೆ ಧನ್ಯವಾದಗಳು. ಆಕೆ ಮತ್ತು ಆಕೆಯ ಗುಂಪಿನವರು ಮನೆಯ ಬಳಿಯಿರುವ ಸಮುದ್ರ ತೀರದಲ್ಲಿ ಸಮುದ್ರದ ಮೀನನ್ನು ಸೂರ್ಯನ ಬಿಸಿಲಿಗೆ ಒಣಗಿಸುತ್ತಿದ್ದರು. ಅವರ ಗುಂಪು ಜೈವಿಕ ತ್ಯಾಜ್ಯ ಡ್ರೈಯರ್ ಹೊಂದಲು ಆರ್ಥಿಕ ಸಹಾಯ ನೀಡಿತು. ಉತ್ಪಾದನಾ ಗುಣಮಟ್ಟ ವರ್ಧನೆ ಮತ್ತು ಪ್ರಯೋಗಾತ್ಮಕ ಉತ್ಪಾದನೆಗಳನ್ನು ಕೆಲವು ಕಾಲ ಮಾಡಿತು. ಟ್ರೈಡ್‌ನ ಪ್ರಾಥಮಿಕ ಸಹಕಾರದೊಂದಿಗೆ ಶ್ರೀದೇವಿ ಹಾಗೂ ಅವರ ಗುಂಪು [ಆಕೆ ಗುಂಪಿನ ವಿವಾದಾತೀತ ಮುಂದಾಳು] ಒಣಮೀನು ಹಾಗೂ ಸೀಗಡಿಗಳನ್ನು ಮಾರಲು ಪ್ರಾರಂಭಿಸಿದರು. ಆಕೆ ತನ್ನ ಉತ್ಪಾದನೆಗಳ ಅದ್ವಿತೀಯತೆಯನ್ನು ಅರಿತಳು. ಗುಣಮಟ್ಟದ ಭರವಸೆಯ ಕುರಿತಾದ ಮಾತುಗಳು ಆಕೆಯ USP ಯಂತೆ. ಕುಟುಂಬಶ್ರೀ ಸಂಸ್ಥೆಯು ಶ್ರೀದೇವಿಯವರು ತಯಾರಿಸಿದ ಒಣಮೀನು ಹಾಗೂ ಸೀಗಡಿಗಳನ್ನು ಗುಣಮಟ್ಟದ ಉತ್ಪಾದನೆಯೆಂದು ಪರಿಗಣಿಸಿತು. ಅವರ ನೆರವಿನೊಂದಿಗೆ ಕೇರಳದ ಪ್ರದರ್ಶನವೊಂದರಲ್ಲಿ ಶ್ರೀದೇವಿಯವರು ಭಾಗವಹಿಸಿದರು ಮತ್ತು ದಿಲ್ಲಿಯಲ್ಲಿ ನಡೆದ ಭಾರತದ ಅಂತಾರ್ರಾಷ್ಟ್ರೀಯ ಮಾರಾಟ ಮೇಳದಲ್ಲಿ ಕೇರಳದ ಡೇರೆಯಲ್ಲಿ ಪ್ರದರ್ಶಿಸಿದರು. ಅವರ ಗುಂಪು ಸುಮಾರು 15 ಟನ್ ಹಸಿ ಸೀಗಡಿಗಳನ್ನು ಸಂಸ್ಕರಿಸಿದೆ. ಮೂರು ಟನ್ ಒಣ ಸೀಗಡಿಗಳನ್ನು ಕೇವಲ ಮೂರು ವರ್ಷಗಳಲ್ಲಿ ಮಾರಿ 98.320 ರೂಪಾಯಿಗಳ ಲಾಭ ಗಳಿಸಿದೆ.

ಶ್ರೀದೇವಿಯವರಿಗೆ ಸಾಮಾಜಿಕ ಜವಾಬ್ದಾರಿಗಳ ಪ್ರಜ್ಞೆ ಅಧಿಕ ಮತ್ತು ಇತರ ಮಹಿಳೆಯರ ಗುಂಪುಗಳಿಗೆ ಸಲಹೆಗಾರ್ತಿ. ಆಕೆಯ ಕೆಲಸಗಳು ಇತರ ಗುಂಪುಗಳಿಗೆ ಪ್ರೇರಣೆಯಾಗಿ ಮೀನು ಹಾಗೂ ಸೀಗಡಿಗಳನ್ನು ಒಣಗಿಸುವ ಕೆಲಸ ಕೈಗೊಂಡಿದ್ದಾರೆ. ಆಕೆಯಿಂದ ತರಬೇತಿ ಪಡೆದ ಐದು ಗುಂಪುಗಳು ಕೇರಳದಲ್ಲಿ ಕಾರ್ಯ ನಿರ್ವಹಿಸುತ್ತಿದೆ. ಸಮುದಾಯದಲ್ಲಿ ವಿಶೇಷವಾಗಿ ಮಹಿಳಾ ಗುಂಪುಗಳಲ್ಲಿ ಹೋರಾಟದ ತೀರ್ಮಾನಗಳನ್ನು ತೆಗೆದುಕೊಳ್ಳುವುದು ಆಕೆಯ ಗುಣ. ಸಮುದಾಯದ ಸೇವೆಗೆ ಬದ್ಧಳು. ಸಭೆಗಳಲ್ಲಿ ಹಾಗೂ ಪಂಚಾಯ್ತಿಯಲ್ಲಿ ಭಾಗವಹಿಸುತ್ತಾರೆ. ವಿಭಿನ್ನ ದೃಷ್ಟಿಕೋನ ಹಾಗೂ “ಸಾಯುತ್ತೇನೆಂದು ಹೇಳಬೇಡಿ” ಎಂಬ ಮನೋಭಾವ ಎಲ್ಲಾ ತೊಡಕುಗಳನ್ನು ಮೆಟ್ಟಿ ನಿಲ್ಲಲು ಕಾರಣವಾಗಿದೆ ಮತ್ತು ಆಕೆಯನ್ನು ಯಶಸ್ವಿ ಉದ್ಯಮಿಯನ್ನಾಗಿ ಮಾಡಿದೆ.

ಸಂಸ್ಥೆಯ ಸುಸ್ಥಿರ ತಂತ್ರಜ್ಞಾನ ಕೇಂದ್ರದ ವಿಜ್ಞಾನಿಗಳದು.

100ಕ್ಕೂ ಹೆಚ್ಚು ಮಹಿಳೆಯರು ತರಬೇತಿ ಪಡೆದರು. 10 ಮಹಿಳೆಯರು ತರಬೇತುದಾರರಾದರು. ಇಂದಿಗೂ ಮಹಿಳೆಯರು ಮನೆಯಿಂದ ಹೊರಬರಬೇಕೆಂದರೆ ಅನೇಕ ಸಾಮಾಜಿಕ, ಸಾಂಸ್ಕೃತಿಕ ತೊಡಕುಗಳನ್ನು ಎದುರಿಸಬೇಕಾಗುತ್ತದೆ. ಹೀಗಾಗಿ ಹಿಂದೆ ಸರಿಯುವವರು ಅಧಿಕ. ಇಬ್ಬರು ಮಹಿಳೆಯರು ಒಲೆ ನಿರ್ಮಾಣದಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ತಮ್ಮ ಜೀವನೋಪಾಯ ಕಂಡುಕೊಂಡಿದ್ದಾರೆ. ಸುಮಾರು ಎಂಟು ಮಹಿಳೆಯರು ಯಾರಾದರೂ ಅವರನ್ನು ಕೇಳಿದರೆ ಒಲೆಗಳನ್ನು ನಿರ್ಮಿಸಿಕೊಡುತ್ತಾರೆ.

ಒಲೆ ಉದ್ಯಮಿಗಳು ಒಲೆಯ ಮೂಲವಿನ್ಯಾಸವನ್ನು ಅರಿತಿದ್ದಾರೆ ಮತ್ತು ಮೂಲವಿನ್ಯಾಸ ಬದಲಿಸುವುದಿಲ್ಲ. ಒಲೆಯ ಕಾರ್ಯಸಾಮರ್ಥ್ಯವನ್ನು ಬದಲಾಯಿಸದೇ ಬಳಕೆದಾರರ ಅಗತ್ಯಗಳಿಗೆ ತಕ್ಕ ಸಣ್ಣಪುಟ್ಟ ಬದಲಾವಣೆಗಳನ್ನು ಮಾಡುತ್ತಾರೆ. ಅವರಿಗೆ ಬೇಕಾದ ಅನುಕೂಲತೆಗಳನ್ನು ಕಲ್ಪಿಸಿಕೊಡುವ ತರಬೇತಿಯನ್ನು ಒಲೆ ಉದ್ಯಮಿಗಳು ಪಡೆದಿದ್ದಾರೆ. ಉದಾಹರಣೆಗೆ, ಸಣ್ಣ ಪಾತ್ರೆ ಇಡುವ ವ್ಯವಸ್ಥೆ ಬೇಕಿದ್ದರೆ ಒಲೆ ಬಾಯಿಯನ್ನು ಸಣ್ಣಗೆ ಮಾಡಿ ಕಟ್ಟಬಲ್ಲರು. ಒಮ್ಮೆ ದೊಡ್ಡ ಕುಟುಂಬವೊಂದಕ್ಕೆ ಅಡುಗೆ ಮಾಡುವ ವ್ಯವಸ್ಥೆ ಮಾಡಬೇಕಿತ್ತು. ಆಗ ತುಮಕೂರಿನ ಒಲೆ ಉದ್ಯಮಿ ಲಲಿತಾಬಾಯಿಯವರು ಎರಡು ಒಲೆಗಳನ್ನು ಅಕ್ಕಪಕ್ಕ ಜೋಡಿಸಿ ಕಟ್ಟಿದರು. ಎರಡೂ ಒಲೆಗಳಿಗೆ ಒಂದೇ ಹೊಗೆ ಕೊಳವೆ ಬರುವಂತೆ ಮಾಡಿದರು. ಹೆಚ್ಚು ಖರ್ಚಿಲ್ಲದೇ ಎರಡು ಒಲೆಗಳು ಅವರಿಗೆ ದೊರಕಿತು.

ಇಬ್ಬರು ಉತ್ಸಾಹಿ ಒಲೆ ಉದ್ಯಮಿಗಳು ಒಲೆ ಗುತ್ತಿಗೆ ಸಿಕ್ಕರೆ ಹಳ್ಳಿಗಳಿಗೂ ಹೋಗಿ ಕಟ್ಟುತ್ತಾರೆ. ಮನೆಯ ಹತ್ತಿರದ ಹಳ್ಳಿಗಳಿಗೆ ಆದ್ಯತೆ. ಹಾಗೆಂದು ದೂರದ ಹಳ್ಳಿಗಳಿಗೆ ಹೋಗಲು ಹಿಂಜರಿಕೆ ಏನಿಲ್ಲ.

ಎಲ್ಲಾ ಮಹಿಳೆಯರೂ ತಮ್ಮ ಉತ್ಪಾದನೆಗಳನ್ನು ನೇರ ಮಾರುತ್ತಾರೆ. ಟೈಡ್ ಅವರಿಗೆ ಮಾರುಕಟ್ಟೆ ಸಂಪರ್ಕ, ಅಭಿವೃದ್ಧಿ ಪ್ರಚಾರ, ಜಾಗೃತಿ ಸಮಾವೇಶ, ಸಮರ್ಥ ಗ್ರಾಹಕರ ಸಮಾವೇಶಗಳನ್ನು ಏರ್ಪಡಿಸಿ ಪ್ರಾಥಮಿಕ ಸಹಾಯ ಮಾಡುತ್ತದೆ. ಒಮ್ಮೆ ಮಾರುಕಟ್ಟೆ ಸಂಪರ್ಕ ಸಿಕ್ಕರೆ ಮಹಿಳೆಯರು ತಮ್ಮ ಉದ್ಯಮವನ್ನು ಮೇಲೆತ್ತಬಲ್ಲರು.

ತರಬೇತಿ ಜೊತೆ ಪ್ರಾಥಮಿಕ ಮಾರುಕಟ್ಟೆ ಸೌಲಭ್ಯ ಹಾಗೂ ಅಭಿವೃದ್ಧಿ ಬೆಂಬಲಗಳು ಮಹಿಳೆಯರು ಸ್ವಯಂಪ್ರಕಾಶಿಸುವಂತೆ ಮಾಡುತ್ತದೆ. ಇದನ್ನು ಅವಲಂಬಿಸಿದ ಅನೇಕ ಮಹಿಳೆಯರು ತಮ್ಮ ಆರ್ಥಿಕಸ್ಥಿತಿಯನ್ನು ಅಭಿವೃದ್ಧಿಪಡಿಸಿಕೊಂಡಿದ್ದಾರೆ. ಮಹಿಳಾ ಒಲೆ ಉದ್ಯಮಿಗಳು ಎಲ್ಲಾ ಸೇರಿ ಸುಮಾರು 5,000 ಒಲೆಗಳನ್ನು ಕಟ್ಟಿದ್ದಾರೆ. 3.5 ಲಕ್ಷ ರೂಪಾಯಿಗಳಿಗೂ ಹೆಚ್ಚು ಗಳಿಕೆ ಹಾಗೂ ಪರಿಸರ ಸ್ವಚ್ಛಗೊಳಿಸಿದ್ದಾರೆ.

## ಜೈವಿಕ ತ್ಯಾಜ್ಯ ಆಧಾರಿತ ಡ್ರೈಯರ್

ಕೇರಳದಲ್ಲಿ ಮಹಿಳೆಯರು ಜೈವಿಕ ತ್ಯಾಜ್ಯ ಆಧಾರಿತ ಡ್ರೈಯರ್‌ಗಳಲ್ಲಿ ಒಣ ಸೀಗಡಿ ಮತ್ತು ಮೀನುಗಳನ್ನು ಸಿದ್ಧಪಡಿಸುವ ತರಬೇತಿ ಪಡೆದಿದ್ದಾರೆ. ಇದು ಉದ್ಯಮವಾಗಿ ರೂಪುಗೊಳ್ಳಲು ಸಹಾಯವನ್ನೂ ಪಡೆದಿದ್ದಾರೆ. ಕರ್ನಾಟಕದಲ್ಲಿ ಮಹಿಳೆಯರು ಅಡಿಕೆ, ತೆಂಗು ಒಣಗಿಸುವ ಉದ್ಯಮ ಪ್ರಾರಂಭಿಸಿದ್ದಾರೆ. ಈ ರೀತಿ ಆಹಾರಪದಾರ್ಥಗಳನ್ನು ಒಣಗಿಸುವಿಕೆಯು ಮಹಿಳೆಯರಿಗೆ ಹೊಸತೇನಲ್ಲ. ಡ್ರೈಯರ್‌ಗಳಲ್ಲಿ ಒಣಗಿಸುವುದರಿಂದ ಅದು ಆರೋಗ್ಯಯುಕ್ತ ಹಾಗೂ ಆ ಮೂಲಕ ಉತ್ತಮ ಗುಣಮಟ್ಟ ದೊರೆಯುತ್ತದೆ. ವರ್ಷವಿಡೀ ಮಳೆಗಾಲದಲ್ಲಿಯೂ ಸಹ ಒಣಉತ್ಪನ್ನಗಳನ್ನು ತಯಾರಿಸುತ್ತಿರಬಹುದು. ವಿಶೇಷವಾಗಿ ಸ್ಥಳೀಯ ಮಾರುಕಟ್ಟೆಯಲ್ಲಿ ಮಾರಾಟ. ಹೊಸದಿಲ್ಲಿಯಲ್ಲಿ ನಡೆದ ಮಾರಾಟ ಉತ್ಸವದಲ್ಲಿ ಸಿಕ್ಕ ಅವಕಾಶ ಬಳಸಿಕೊಂಡು ಗುಂಪಾಗಿ ಭಾಗವಹಿಸಿದರು ಮತ್ತು ಒಣ ಸೀಗಡಿಗಳನ್ನು ಮಾರಿದರು.

## ಸವಾಲುಗಳು ಹಾಗೂ ಕಲಿಕೆಗಳು

ನಮ್ಮಲ್ಲಿ ನಾವು ಅನೇಕ ಮಹಿಳೆಯರನ್ನು ತರಬೇತಿಗೊಳಿಸುತ್ತೇವೆ. ಅವರಲ್ಲಿ ಶೇಕಡಾ 5ರಷ್ಟು ಮಹಿಳೆಯರು ಇದನ್ನು ಬಿಡುವಿನ ವೇಳೆಯ ಚಟುವಟಿಕೆಯಾಗಿ ನಡೆಸಿದರೆ ಅದೇ ಲಾಭ. ಮಹಿಳೆಯರು ಸಾಮಾಜಿಕವಾಗಿ ಹಾಗೂ ಕೌಟುಂಬಿಕವಾಗಿ ಅನೇಕ ಪರಿಸ್ಥಿತಿಗಳನ್ನು ಮೀರಿ ಬರಬೇಕಾಗುತ್ತದೆ. ಸಮಾಜದಲ್ಲಿ ಅನೇಕ ಪಾತ್ರಗಳನ್ನು ನಿರ್ವಹಿಸಬೇಕಾಗಿದೆ. ಉದ್ಯಮವು ಆಕೆಗೆ ಹೊಸ ಹೊರೆಯೇನಲ್ಲ.

ಮಹಿಳಾ ಸಬಲೀಕರಣವೆನ್ನುವದನ್ನು ಸಮುದಾಯದ ಚಟುವಟಿಕೆಗಳಲ್ಲಿ ಹೆಚ್ಚು ಭಾಗವಹಿಸುವಿಕೆ, ನಿರ್ಧಾರ ತೆಗೆದುಕೊಳ್ಳುವಿಕೆ ಹಾಗೂ ಬದಲಾದ ಮಹಿಳೆಯರ ಪಾತ್ರಗಳನ್ನು ಮನೆಯೊಳಗೂ ಸ್ವೀಕರಿಸುವಿಕೆಯ ಮೂಲಕ ಕಾಣಬಹುದು. ಹೊಸ ಕೌಶಲ್ಯದ ಕಲಿಕೆಯು ಆಕೆಗೆ ಜೀವನೋಪಾಯದ ಗಳಿಕೆಗಾಗಿಯೊಂದೇ ಅಲ್ಲ, ಸಮಾಜದಲ್ಲೊಂದು ಸ್ಥಾನ ಗಳಿಸಲೂ ಸಹಾಯಕ. ಆರ್ಥಿಕ ಹಾಗೂ ಸಾಮಾಜಿಕ ಸ್ಥಾನಮಾನ ಹೆಚ್ಚಳವು ಆಕೆಯಲ್ಲೊಂದು ವಿಶ್ವಾಸದ ಮಟ್ಟವನ್ನು ಅಭಿವೃದ್ಧಿಪಡಿಸುತ್ತದೆ ಮತ್ತು ಕೊನೆಯಲ್ಲಿ ಅವರ ಸಬಲೀಕರಣಕ್ಕೆ ದಾರಿಯಾಗುತ್ತದೆ.

■ **R Prabha**
TIDE (Technology Informatics Design Endeavour)
No 19, 9th Cross, Malleswaram,
Bangalore-560 003

E-mail: r.prabha@tide-india.org

**ಆಂಗ್ಲ ಮೂಲ: ಲೀಸಾ ಇಂಡಿಯಾ, ಸಂಪುಟ 11, ಸಂಚಿಕೆ 2, ಜೂನ್ 2009**

# ಮಶ್ರೂಮ್ ಮಹಿಳೆ ತೋರಿದ ಮಾರ್ಗ

■ ಜಿ.ಎಸ್.ಉನ್ನಿಕ್ರಿಷ್ಣನ್ ನಾಯರ್



■ ಜಾನಕಿ

**ಕೇರಳದಲ್ಲಿ ಅಣಬೆ ಕೃಷಿಯು ಉದ್ಯೋಗ ಹಾಗೂ ಆದಾಯಕ್ಕೆ ಅಡೆತಡೆಯಿಲ್ಲದ ಸತ್ವಯುತ ಮೂಲವಾಗಿದೆ. ನಿರುದ್ಯೋಗಿ ಯುವ ಜನಾಂಗಕ್ಕೆ ಉತ್ಸಾಹಿ ಉದ್ಯಮಶೀಲೆ ಜಾನಕಿ ಸ್ವಯಂ ಬೆಳೆಸಿದ ಅಣಬೆ ಉತ್ಪಾದನಾ ಉದ್ಯಮ ಒಂದು ಮಾದರಿ.**

ಕೇರಳದ ತ್ರಿವೇಂಡ್ರಂ ಜಿಲ್ಲೆಯ ಜಾನಕಿ ಬಹುದೊಡ್ಡ ಪ್ರಮಾಣದ ಅಣಬೆ ಉತ್ಪಾದಕರಲ್ಲೊಬ್ಬರು. ಅವರ ಯಶೋಗಾಥೆಯು ಜಿಲ್ಲೆಯ ಸ್ವ-ಉದ್ಯೋಗ ಕೈಗೊಳ್ಳುವ ಯುವಜನಾಂಗಕ್ಕೆ ಪ್ರೇರೇಪಣೆ. ಇತ್ತೀಚೆಗೆ ಸೋಲನ್‌ನಲ್ಲಿ ರಾಷ್ಟ್ರೀಯ ಅಣಬೆ ಸಂಶೋಧನಾ ಕೇಂದ್ರವು ಅವರನ್ನು ದೇಶದ ಉತ್ತಮ ಅಣಬೆ ಕೃಷಿಕರು ಎಂದು ಗೌರವಿಸಿದೆ.

ಇಸವಿ 1998ರಲ್ಲಿ ಜಾನಕಿಯವರ ಪಯಣದ ಪ್ರಾರಂಭ. ಖಾಸಗಿ ಸಂಸ್ಥೆಯೊಂದರಿಂದ ಹೊರಬಂದ ಅವರು ಆದಾಯವರ್ಧನೆಯ ಪರ್ಯಾಯ ವಿಷಯಗಳ ಹುಡುಕಾಟದಲ್ಲಿದ್ದರು. ಸ್ವಯಂ ಉದ್ಯೋಗ ಮನದ ಬಯಕೆ. ಹೊಳೆದದ್ದು ಅಣಬೆ ಉತ್ಪಾದನಾ ಯೋಜನೆ. ಕೇರಳದಲ್ಲಿ ಆಗಷ್ಟೇ ಅಣಬೆ ಉದ್ಯಮ ಪ್ರಾರಂಭವಾಗಿತ್ತು. ಕೇರಳ ವಿಶ್ವವಿದ್ಯಾನಿಲಯವು ನೀಡಿದ ಅಣಬೆ ಉತ್ಪಾದನಾ ತರಬೇತಿಯಲ್ಲಿ ಅವರು ಪಾಲ್ಗೊಂಡರು. ಇಸವಿ 1999ರಲ್ಲಿ ಅಣಬೆ ಕೃಷಿಯ ಪ್ರಯೋಗ ಪ್ರಾರಂಭ. ಸಣ್ಣಕೋಣೆಯಲ್ಲಿ 10 ಬೆಡ್‌ಗಳು ಅಣಬೆ ಬೆಳೆಗೆ ಸಿದ್ಧವಾದವು. ಅಣಬೆಗಳು ಬೆಳೆದವು. 20ನೇ ದಿನ ಕೊಯ್ಲಿಗೆ ಬಂತು. ಒಂದು ತಿಂಗಳವರೆಗೆ ಕೊಯ್ಲು. ಪ್ರತಿ ಬೆಡ್‌ನಿಂದಲೂ 800 ಗ್ರಾಂ ಇಳುವರಿ. ಕೊಯ್ದಂತೆಲ್ಲಾ ಮನೆಬಳಕೆಗೆ ಸಂಬಂಧಿಕರಿಗೆ ಹಾಗೂ ಸ್ನೇಹಿತರಿಗೆ ಹಂಚಿಕೆ.

## ಹಿಗ್ಗಿದ ಉದ್ಯಮ

ಕ್ರಮೇಣ, ಜಾನಕಿಯವರು ಬೆಡ್ ಸಂಖ್ಯೆ ಹೆಚ್ಚಿಸಿದರು. ಕೊಯ್ದ ಅಣಬೆಗಳನ್ನು ಮಾರಲು ತೊಡಗಿದರು. ಆದರೆ ತ್ರಿವೇಂಡ್ರಮ್‌ನಲ್ಲಿ ಅಣಬೆ ಅಡುಗೆಗಳು ಜನಪ್ರಿಯವಾಗಿರಲಿಲ್ಲ. ಸಾಮಾನ್ಯರು ತಿನ್ನುತ್ತಿರಲಿಲ್ಲ. ಅದೊಂದು ವಿಷಕಾರಿ ಎಂಬ ಅಭಿಪ್ರಾಯ. ಮೇಲ್ವರ್ಗದವರು ಖುಷಿಗಾಗಿ ಅಣಬೆ ಅಡುಗೆಗಳನ್ನು ಸವಿಯುತ್ತಿದ್ದರು.

ಮೇಲ್ದರ್ಜೆಯ ಹೋಟೆಲ್‌ಗಳಲ್ಲಿ ಅಣಬೆಗಳ ಬಳಕೆ ಅಧಿಕ. ಅಲ್ಲಿ ಬಟನ್ ಅಣಬೆ [Agaricus species]ಗಳಿಗೆ ಆದ್ಯತೆ. ಒಯೆಸ್ಟರ್ ಅಣಬೆ Pleurotus species] ಬಲುರುಚಿ. ಅದು ಸಮಶೀತೋಷ್ಣ ಪ್ರದೇಶದಲ್ಲಿ ಚೆನ್ನಾಗಿ ಬೆಳೆಯುತ್ತದೆ ಎಂದು ಅವರಿಗೆ ಗೊತ್ತಿರಲಿಲ್ಲ. ಅವರೆಲ್ಲಾ ಬಟನ್ ಅಣಬೆ ಮಾತ್ರ ರುಚಿ ಹಾಗೂ ಅದರಿಂದ ಮಾತ್ರ ಅಡುಗೆ ಸಾಧ್ಯ ಎಂದಷ್ಟೇ ತಿಳಿದಿದ್ದರು. ಜಾನಕಿ ಹೋಟೆಲ್ ಮ್ಯಾನೇಜರ್‌ಗಳನ್ನು ಭೇಟಿ ಮಾಡಿದರು. ಒಯೆಸ್ಟರ್ ಅಣಬೆಯ ಪ್ರಯೋಜನಗಳನ್ನು ತಿಳಿಸಿದರು.

ಬೆಂಗಳೂರಿನ ಫೈವ್ ಸ್ಟಾರ್ ಹೋಟೆಲ್‌ವೊಂದರ ಅಡುಗೆ ಮುಖ್ಯಸ್ಥ [ಚೆಫ್]ರೊಬ್ಬರನ್ನು ಜಾನಕಿ ಭೇಟಿ ಮಾಡಿದರು. ಅವರು ಒಯೆಸ್ಟರ್ ಅಣಬೆಯ ಪಾಕ ವಿಧಾನ ತಜ್ಞ. ಜಾನಕಿ ಅವರಿಂದ ಒಯೆಸ್ಟರ್ ಅಣಬೆಯ ವಿವಿಧ ಪಾಕವಿಧಾನಗಳನ್ನು ಕಲಿತರು. ತಮ್ಮ ಪಟ್ಟಣಕ್ಕೆ ಹಿಂದಿರುಗಿದ ಮೇಲೆ ಒಯೆಸ್ಟರ್ ಅಣಬೆಯ ಪಾಕಗಳ ತಯಾರಿ. ಅವನ್ನೆಲ್ಲಾ ಎರಡು ಹೋಟೆಲ್‌ಗಳಿಗೆ ಉಚಿತವಾಗಿ ನೀಡಿದರು. ಅದರ ಗುಣಮಟ್ಟ ಹಾಗೂ ರುಚಿಯಿಂದ ತೃಪ್ತರಾದ ಹೋಟೆಲ್‌ನವರು ಒಯೆಸ್ಟರ್ ಅಣಬೆಯನ್ನು ಕೋರಿ ಆದೇಶ ನೀಡಿದರು. ಆಗ ಬಟನ್ ಅಣಬೆ ಬೆಲೆ ಒಂದು ಕಿಲೋಗ್ರಾಂಗೆ 200 ರೂಪಾಯಿಗಳಿತ್ತು. ಜಾನಕಿಯವರು ಒಯೆಸ್ಟರ್ ಅಣಬೆಯನ್ನು ಒಂದು ಕಿಲೋಗ್ರಾಂಗೆ 100 ರೂಪಾಯಿಗಳಂತೆ ನೀಡಿದರು. ಕ್ರಮೇಣ ಇನ್ನೂ 20 ಹೋಟೆಲ್‌ಗಳು ಹಾಗೂ ಕ್ಲಬ್‌ಗಳು ತಮಗೂ ಬೇಕೆಂಬ ಆದೇಶ ನೀಡಿದವು. ಹೆಚ್ಚಿದ ಹಕ್ಕೊತ್ತಾಯದಿಂದಾಗಿ ಮತ್ತು ಬ್ಯಾಂಕ್ ಲೋನ್ ಏರಿಸಿದ ಜಾನಕಿಯವರು, ಅಣಬೆ ಉತ್ಪಾದನೆಯ ಪ್ರಮಾಣವನ್ನು 3,000 ಬೆಡ್‌ಗಳಿಗೆ ಹಿಗ್ಗಿಸಿದರು. ಹೊಸ ಕಟ್ಟಡವನ್ನು ಬಾಡಿಗೆ ಪಡೆದರು. ಆರು ಜನ ಯುವಕರಿಗೆ ಕೆಲಸ ನೀಡಿದರು. ದಿನಕ್ಕೆ 30 ಕಿಲೋಗ್ರಾಂನಷ್ಟು ಒದಗಿಸಲು ಸಿದ್ಧರಾದರು.

ಸಾಮಾನ್ಯ ಜನರೊಳಗೂ ಅಣಬೆಯನ್ನು ಜನಪ್ರಿಯಗೊಳಿಸುವ ಪ್ರಯತ್ನವನ್ನು ಜಾನಕಿಯವರು ಪ್ರಾರಂಭಿಸಿದರು. ವಸತಿ ಸಂಘಟನೆಗಳ ಸಹಾಯದಿಂದ ಪಟ್ಟಣದ ವಿವಿಧ ಕಾಲೊನಿಗಳಲ್ಲಿ ಪ್ರದರ್ಶನದ ವ್ಯವಸ್ಥೆ ಮಾಡಿದರು. ಅಲ್ಲಿ ಅಣಬೆ ಸೂಪ್, ಅಣಬೆ ಉಪ್ಪಿನಕಾಯಿ, ಅಣಬೆ ಕಟ್‌ಲೆಟ್ ಹಾಗೂ ಶುದ್ಧ ಅಣಬೆಗಳ ಪ್ಯಾಕೆಟ್‌ಗಳನ್ನು ಕನಿಷ್ಠ ಬೆಲೆಯಲ್ಲಿ ಒದಗಿಸತೊಡಗಿದರು. ರಾಜ್ಯಮಟ್ಟದ ಪುಷ್ಪ ಪ್ರದರ್ಶನ ಮತ್ತು ಕೃಷಿ ಪ್ರದರ್ಶನಗಳಲ್ಲೂ ಭಾಗವಹಿಸತೊಡಗಿದರು. ಆಕೆಯ ಉತ್ಪಾದನೆಗಳು "ಸ್ವಾದಿಷ್ಟ ಮಶ್ರೂಮ್" ಹೆಸರಿನಲ್ಲಿ ಜನಪ್ರಿಯವಾಗತೊಡಗಿತು.

ತಮ್ಮ ಉದ್ಯಮವನ್ನು ಅಣಬೆ ಬೀಜದ ಉತ್ಪಾದನೆಗೂ ವಿಸ್ತರಿಸಿದರು. ಮನೆಯ ಕೋಣೆಯೊಂದರಲ್ಲಿ ಅಗತ್ಯ ಉಪಕರಣಗಳ ಸಹಾಯದೊಂದಿಗೆ ಪ್ರಯೋಗಾಲಯ ಮಾಡಿಕೊಂಡರು. ಪ್ರತಿ ತಿಂಗಳು 600 ಪ್ಯಾಕೆಟ್ ಅಣಬೆ ಬೀಜಗಳ ಉತ್ಪಾದನೆ ಮಾಡತೊಡಗಿದರು.

## ಅಲ್ಪವೆಚ್ಚದ ಸ್ಥಳೀಯ ಪರಿಹಾರಗಳ ಹುಡುಕಾಟ

ಬೇಸಿಗೆಯಲ್ಲಿ ಅಧಿಕ ಉಷ್ಣಾಂಶದ ಕಾರಣ ಅಣಬೆ ಉತ್ಪಾದನೆ ಕಡಿಮೆಯಾಗುತ್ತದೆ. ಗ್ರಾಹಕರ ಅಗತ್ಯ ಪೂರೈಸುವುದೂ ಕಷ್ಟ. ಸಮಸ್ಯೆಯ ನಿವಾರಣೆಗೆ ಜಾನಕಿಯವರು ಉಪಾಯ ಕಂಡುಕೊಂಡರು. ಅಣಬೆಗಳಿಗೆ ಬಿಸಿಲಿನ ಪರಿಣಾಮ ಕಡಿಮೆ

ಮಾಡಲು ಮನೆಯ ಮಾಡಿನ ಮೇಲೆ ಸಸ್ಯಗಳನ್ನು ಬೆಳೆಸುವುದು. ಹೀಗೆ ಮಹಡಿಯ ಮೇಲೆ ಹಸುರು ಮನೆಯ ನಿರ್ಮಾಣ. ಕುಂಡಗಳಲ್ಲಿ ಒಂದು ಸಾವಿರ ಆಂಥೂರಿಯಂ ಸಸ್ಯಗಳನ್ನು ಬೆಳೆಸಲು ಪ್ರಾರಂಭ. ಪ್ರತಿದಿನ ನೀರಾವರಿ. ಇದರಿಂದ ಬಿಸಿಲಿನ ತಾಪ ತಗ್ಗಿತು. ಅಷ್ಟೇ ಅಲ್ಲ, ಆಂಥೂರಿಯಂ ಹೂಗಳಿಂದ ಹೆಚ್ಚುವರಿ ಆದಾಯ ಸಹ ಸಿಗತೊಡಗಿತು.

ಅಣಬೆಗಳು ಭತ್ತದ ಹುಲ್ಲಿನ ಕಡ್ಡಿಗಳ ಮೇಲೆ ಬೆಳೆಯುತ್ತವೆ. ಇದರಿಂದ ತ್ಯಾಜ್ಯ ಹೆಚ್ಚುತ್ತದೆ. ಇದನ್ನು ಗಾಳಿಯಾಡುವ ಮುಕ್ತ ಪದ್ಧತಿಯಲ್ಲಿ ಕಾಂಪೋಸ್ಟ್ ಮಾಡಬಹುದು. ಹೀಗೆ ಮಾಡುವಾಗ ಕೊಳೆತ ವಾಸನೆ ಹರಡುತ್ತದೆ. ಜಾನಕಿಯವರು ಎರೆಹುಳು ಗೊಬ್ಬರ ತಯಾರಿಸತೊಡಗಿದರು. ಆಗ ಕೆಟ್ಟ ವಾಸನೆಯ ಸಮಸ್ಯೆಯ ನಿವಾರಣೆ. ಕಾಂಪೋಸ್ಟ್ ಅಗುವ ಸಮಯವೂ ಕಡಿಮೆ ಸಾಕು. ತ್ಯಾಜ್ಯಕ್ಕೆ ಫಲಾತ್ಮಕ ಸೂಕ್ಷ್ಮಜೀವಿ ಚಿಕಿತ್ಸೆ. ಇದರಿಂದ ಕಾಂಪೋಸ್ಟ್ ಆಗುವಿಕೆ ಇನ್ನಷ್ಟು ತ್ವರಿತಗೊಂಡಿತು. ಗುಣಮಟ್ಟ ಅತ್ಯುತ್ತಮವಾಗಿತ್ತು. ಒಳ್ಳೆಯ ಹಕ್ಕೊತ್ತಾಯ ಪಡೆಯಿತು. ಎರಡು ಕಿಲೋಗ್ರಾಂಗೆ 10 ರೂಪಾಯಿಗಳಂತೆ ನಗರದ ಕೃಷಿಕರಿಗೆ ಮಾರಾಟ. ಅಗತ್ಯವಿರುವವರಿಗೆ ಯೋಗ್ಯಬೆಲೆಗೆ ಎರೆಹುಳುಗಳನ್ನು ಮಾರತೊಡಗಿದರು.

### ಬಹುದೂರ ವ್ಯಾಪಿಸಿದ ಯಶಸ್ಸು.

ಜಾನಕಿಯವರು ಕೃಷಿಕರಿಗೆಲ್ಲಾ ಚಿರಪರಿಚಿತರು. ಎರಡು ಪತ್ರಿಕೆಗಳಲ್ಲಿ ಆಕೆಯ ಚಟುವಟಿಕೆಗಳ ವರದಿ ಬಂತು. ಸ್ಥಳೀಯ ದೈನಿಕದ ವರದಿ ಅಧ್ಭುತ ಪರಿಣಾಮ ಬೀರಿತು. ಸುಮಾರು ಎರಡು ಸಾವಿರ ಜನರು, ಹೆಚ್ಚಿನವರು ನಿರುದ್ಯೋಗಿಳು ಆಕೆಯನ್ನು ಸಂಪರ್ಕಿಸಿದರು. ಸ್ವಉದ್ಯೋಗವಾಗಿ ಅಣಬೆ ಕೃಷಿಯ ತಾಕತ್ತನ್ನು ತಿಳಿದರು. ಬಹುಜನರ ಒತ್ತಾಯಕ್ಕಾಗಿ ಜಾನಕಿಯವರು ತರಬೇತಿ ತರಗತಿಗಳನ್ನು ನಡೆಸಲು ಪ್ರಾರಂಭಿಸಿದರು. ತರಬೇತಿ ಪಡೆದ ಸುಮಾರು ಒಂದು ಸಾವಿರ ಜನರು ಅಣಬೆ ಕೃಷಿ ಕೈಗೊಂಡರು. ಅವರಲ್ಲಿ ಕೆಲವರಿಗೆ, ಅವರ ಉತ್ಪಾದನೆಗಳಿಗೆ ಜಾನಕಿಯವರೇ ಮಾರುಕಟ್ಟೆ ಒದಗಿಸಿದರು. ರಾಜ್ಯಮಟ್ಟದ "ಮಶ್ರೂಮ್ ಕ್ಲಬ್" ಪ್ರಾರಂಭಿಸಿದರು. ಸದ್ಯ ಅದರಲ್ಲಿ ಎರಡು ಸಾವಿರ ಜನ ಸದಸ್ಯರಿದ್ದಾರೆ.

ಇಂದು ಜಾನಕಿಯವರು ಸ್ವವಿಶ್ವಾಸಿತ ಯಶಸ್ವಿ ಮಹಿಳೆಯಷ್ಟೇ ಅಲ್ಲ, ಬದುಕು ರೂಪಿಸಿಕೊಳ್ಳಲು ಯುವಜನಾಂಗಕ್ಕೆ ಮಾರ್ಗ ತೋರುವ ಮಾರ್ಗದರ್ಶಕಿಯಾಗಿ ರೂಪುಗೊಡರು. ಸುತ್ತಲಿನವರಿಗೆ ಪ್ರೇರೇಪಕಿ.

ಜಾನಕಿಯವರು ಹೇಳುತ್ತಾರೆ "ನಾನೀಗ ನನ್ನ ಕಾಲಮೇಲೆ ನಿಂತು ಕುಟುಂಬಕ್ಕೋಸ್ಕರ ಸ್ವಲ್ಪ ಗಳಿಸುತ್ತಿರುವುದು ಅತ್ಯಂತ ತೃಪ್ತಿಯನ್ನು ಹಾಗೂ ಖುಷಿಯನ್ನು ತಂದಿದೆ. ಅದಕ್ಕಿಂತಲೂ ಅನೇಕ ಯುವ ನಿರುದ್ಯೋಗಿಗಳಿಗೆ ಜೀವನೋಪಾಯ ಹುಡುಕಿಕೊಳ್ಳಲು ಇದು ಸಹಾಯಕ. ನಾನು ನನ್ನೆರೆಡು ಮಕ್ಕಳಿಗೆ ಉದ್ಯಮಶೀಲತೆಯ ಮೂಲತತ್ವಗಳನ್ನು ಬೋಧಿಸುತ್ತೇನೆ. ಇದೆಲ್ಲಾ ನನ್ನ ಪತಿಯ ತುಂಬು ಹೃದಯ ಹಾಗೂ ದೇವರ ಕೃಪೆಯಿಂದ ಸಾಧ್ಯವಾಗಿದೆ".

■ **G S Unni Krishnan Nair**
Agricultural officer (Farm Information Bureau)
& farm journalist
Anjana, t.c-25/3175-1, Vanchiyoor
Trivandrum, Kerala - 695035.

E-mail: vanchiyur.unnikrishnan@rediffmail.com
vanchiyuunni@gmail.com

**ಆಂಗ್ಲ ಮೂಲ: ಲೀಸಾ ಇಂಡಿಯಾ, ಸಂಪುಟ 11, ಸಂಚಿಕೆ 4, ಸೆಪ್ಟೆಂಬರ್ 2009**

# ಮೌಲ್ಯವರ್ಧನೆ ಎಂಬ ಮಂತ್ರ ಉತ್ತಮ ಆದಾಯಕ್ಕೊಂದು ಸೂತ್ರ

■ **ಉತ್ಕರ್ಷ್ ಘಾಟೆ**

**ಸಮುದಾಯ ಆಧಾರಿತ ಸಂಘಟನೆಗಳು ಸ್ವಸುಸ್ಥಿರ ಮಾದರಿಗಳನ್ನು ಸೃಷ್ಟಿಸಿ, ಸಣ್ಣರೈತರಿಗೆ ಮತ್ತು ಗ್ರಾಮೀಣ ಉದ್ಯಮಿಗಳಿಗೆ ಗ್ರಾಮಾಂತರ ಪ್ರದೇಶದಲ್ಲಿಯೇ ಆದಾಯ ಹೆಚ್ಚಳ ಹಾಗೂ ಸುಸ್ಥಿರತೆಗೆ ಹೊಸ ಅವಕಾಶಗಳನ್ನು ತೆರೆದಿವೆ. ಸಿಸಿಡಿಯ ಈ ಬದಲಾವಣೆಯ ಹೆಜ್ಜೆಯು ಗ್ರಾಮೀಣ ಹಕ್ಕೊತ್ತಾಯಗಳಾದ ಆಹಾರ, ಆರೋಗ್ಯ, ಶಕ್ತಿ ಮತ್ತು ಉದ್ಯೋಗಗಳನ್ನು ತಲುಪಲು ಸಹಾಯಕವಾಗಿದೆ. ಗ್ರಾಮೀಣ ಉತ್ಪನ್ನಗಳಿಗೆ ಮಾರುಕಟ್ಟೆ ಅವಕಾಶಗಳನ್ನು ಸಹಾ ಸೃಷ್ಟಿಸಿದೆ.**

ಕೃಷಿಯಲ್ಲಿ ಕಡಿಮೆ ಆದಾಯದ ಸಮಸ್ಯೆಗೆ ಮೌಲ್ಯವರ್ಧನೆಯ ಕುರಿತಾದ ಅರಿವಿಲ್ಲದಿರುವಿಕೆ ಕಾರಣವಾಗಿದೆ. ಅನೇಕ ಉತ್ಪನ್ನಗಳು ಕಚ್ಚಾರೀತಿಯಲ್ಲೇ ಮಾರಾಟವಾಗುತ್ತವೆ. ನಗರಗಳಲ್ಲಿ ಮೌಲ್ಯವರ್ಧಿತವಾಗಿ ಹಿಂತಿರುಗಿ ಹೆಚ್ಚಿನ ಬೆಲೆಗೆ ಹಳ್ಳಿಗೆ ಬಂದು ತಲುಪುತ್ತವೆ. ಹಳ್ಳಿಗಳಲ್ಲೇ ಮೌಲ್ಯವರ್ಧನೆಗೆ ಅನುಕೂಲತೆಗಳನ್ನು ಅಳವಡಿಸುವುದರಿಂದ ಇದನ್ನು ತಡೆಯಬಹುದು ಮತ್ತು ಮೌಲ್ಯವರ್ಧಿತ ಉತ್ಪನ್ನಗಳನ್ನು ನಗರಗಳಲ್ಲಿ ಹೆಚ್ಚಿನ ಬೆಲೆಗೆ ಮಾರಬಹುದು. ಮೌಲ್ಯವರ್ಧನೆಯನ್ನು ಗ್ರಾಮೀಣ ಉದ್ಯೋಗವಾಗಿಸಿದಾಗ ಮಾತ್ರ ಸ್ಥಳೀಯವಾಗಿ ಹೆಚ್ಚು ಉದ್ಯೋಗಗಳನ್ನು, ಉತ್ತಮ ಆದಾಯವನ್ನು ಸಮರ್ಥವಾಗಿ ಸೃಷ್ಟಿಸಲು ಸಾಧ್ಯ ಮತ್ತು ಈ ರೀತಿಯ ನೌಕರಿಗಳು ಗ್ರಾಮೀಣ ವಲಸೆಯನ್ನು ಕಡಿಮೆ ಮಾಡುತ್ತದೆ.

### ಆಹಾರಮ್ ಉತ್ಪಾದಕ ಕಂಪೆನಿ

ತಮಿಳುನಾಡಿನ ಮಧುರೆ ಜಿಲ್ಲೆಯ ಕಾರ್ಯನಿರತ ಸರ್ಕಾರೇತರ ಸಂಸ್ಥೆ CCD ಯು ರೈತರ ಒಡೆತನದ ಸಂಘಟನೆಯೊಂದನ್ನು ರಚಿಸಲು ಸಹಾಯ ಮಾಡಿದೆ. ಆಹಾರಮ್ ಟ್ರೆಡಿಷನಲ್ ಕ್ರಾಪ್ ಪ್ರೊಡ್ಯೂಸರ್ಸ್ ಕಂಪೆನಿ ಲಿಮಿಟೆಡ್ ಅನ್ನು ಸಣ್ಣರೈತರ ಮತ್ತು ಗ್ರಾಮೀಣ ಉದ್ಯಮಿಗಳ ಆದಾಯ ಹೆಚ್ಚಳ ಹಾಗೂ ಸುಸ್ಥಿರತೆಗೆ ಸಹಾಯ ಮಾಡಲು ಪ್ರಾರಂಭಿಸಲಾಗಿದೆ. ಇದು ಸಮುದಾಯ

ಆಧಾರಿತ ಸಂಘಟನೆಗಳ (CBO) ಸಹಕಾರ ಮತ್ತು ಮಿಶ್ರ ಮೌಲ್ಯ ಸರಪಣಿ ಸೇವೆಗಳ ಹಂಚಿಕೆಯ ಮೂಲಕ ಸಣ್ಣರೈತರ ಮತ್ತು ಗ್ರಾಮೀಣ ಉದ್ಯಮಿಗಳ ಸಬಲತೆಗೆ ನಿಷ್ಠವಾಗಿದೆ. ಆಹಾರಮ್ ಗ್ರಾಮೀಣ ಉತ್ಪನ್ನಗಳನ್ನು ಹಂಚಿಕೆದಾರರಿಂದ ಒಟ್ಟಾಗಿ ಕೊಂಡು ಮಾರುಕಟ್ಟೆ ದೊರಕಿಸಿಕೊಡಲು ಸಹಕರಿಸುತ್ತದೆ ಹಾಗೂ ಸಾಲ ಒದಗಿಸುತ್ತದೆ. ಸಾಮರ್ಥ್ಯ ನಿರ್ಮಾಣಕ್ಕೆ ಸರ್ಕಾರೇತರ ಸಂಸ್ಥೆಗಳ ಜಾಲವನ್ನು ಸಂಘಟಿಸುತ್ತದೆ.

ಆಹಾರಮ್ ಒಂದು ಲಾಭಾಂಶವನ್ನು ಹಂಚಿಕೊಳ್ಳುವ ಉದ್ಯಮ ಮಾದರಿ. ಅದು ಮೂರು ಹಂತದ ಕೃಷಿ ಆರ್ಥಿಕತೆಗಳಾದ ಮಾರುಕಟ್ಟೆ, ಸರ್ಕಾರೇತರ ಸಂಸ್ಥೆಗಳು (NGO) ಹಾಗೂ ಸಮುದಾಯ ಆಧಾರಿತ ಸಂಘಟನೆಗಳನ್ನು (CBO) ಜೋಡಿಸುತ್ತದೆ. ಆಹಾರಮ್ ಉದ್ಯಮ ಮಾದರಿಯು NGO ಸಹಭಾಗಿಗಳ ಮೂಲಕ ಕಾರ್ಯ ನಿರ್ವಹಿಸುತ್ತದೆ. ಅದು CBO ಗಳ ಸಹಕಾರದೊಂದಿಗೆ ಸಾಂಘಿಕವಾಗಿ ಒಳಸುರಿಗಳನ್ನು ಖರೀದಿಸಿ, ಸಂಸ್ಕರಿಸಿ ಮಾರಾಟ ಯೋಗ್ಯವಾಗಿಸುತ್ತದೆ ಮತ್ತು ಉತ್ಪನ್ನಗಳಿಗೆ ಏಕರೂಪದ ಗುರುತು ನೀಡುತ್ತದೆ. ಆಮೇಲೆ ಆ NGO ಗಳು ಸಂಸ್ಕರಿಸಿದ ಸರಕುಗಳನ್ನು ಆಹಾರಮ್‌ನ ಸಗಟು ವ್ಯಾಪಾರಿಗಳಿಗೆ ಅಥವಾ ಪ್ರಾದೇಶಿಕ ಮತ್ತು ಸ್ಥಳೀಯ ಚಿಲ್ಲರೆ ವ್ಯಾಪಾರಿಗಳಿಗೆ ಆಹಾರಮ್ ಬ್ರಾಂಡ್ ಹೆಸರಿನಲ್ಲಿ ಮಾರಲು ಅನುಕೂಲತೆಗಳನ್ನು ಮಾಡಿಕೊಡುತ್ತದೆ. ಆಹಾರಮ್ ಕಂಪೆನಿಯು ಈ ವಹಿವಾಟನ್ನೆಲ್ಲಾ ದೊಡ್ಡ ವ್ಯಾಪಾರಸ್ಥರು ಮತ್ತು NGOಗಳ ಮೂಲಕ ತಾರ್ಕಿಕವಾದ ಸಹಕಾರದೊಂದಿಗೆ ನಿರ್ವಹಿಸುತ್ತದೆ. ಮೌಲ್ಯವರ್ಧಿತ ಮರುಮಾರಾಟಕ್ಕೋಸ್ಕರ ಆಹಾರಮ್ CBO ಉತ್ಪತ್ತಿಗಳ ಸಗಟು ಖರೀದಿಯ ಒಪ್ಪಂದವನ್ನು ಮಾಡಿಕೊಳ್ಳುತ್ತದೆ. [ಉತ್ಪನ್ನಗಳಿಗೆ ಅಕಾಲದಲ್ಲಿ ಮತ್ತು ಹೆಚ್ಚಿನ ಹಕ್ಕೊತ್ತಾಯವಿರುವ ಪ್ರದೇಶಗಳಲ್ಲಿ ಗಳಿಕೆಯು ಹೆಚ್ಚು ಸಿಗುತ್ತದೆ].

ಮಧುರೈ ಹತ್ತಿರದ ಹಳ್ಳಿಗಳ ಕೆಲವು ನೂರು ಕುಟುಂಬಗಳು ಗುಣಮಟ್ಟದ ಹಂಚಿಕೆದಾರರಿಂದ ರಿಯಾಯಿತಿ ದರದಲ್ಲಿ ದಿನಸಿ [ದ್ವಿದಳ ಧಾನ್ಯಗಳು, ಎಣ್ಣೆ ಹಾಗೂ ಸಾಂಬಾರ ಪದಾರ್ಥಗಳು] ಪದಾರ್ಥಗಳ ದೊಡ್ಡಮಟ್ಟದ ಖರೀದಿ ಪ್ರಾರಂಭಿಸಿದರು. ಅವರೆಲ್ಲಾ CCDಯು ಪ್ರೋತ್ಸಾಹಿಸುತ್ತಿರುವ ಸ್ವಸಹಾಯ ಸಂಘಗಳ (SHG) ಸದಸ್ಯರು. CCDಯು ಅವರಿಗೆ ಈ ಎಲ್ಲಾ ಉತ್ಪನ್ನಗಳನ್ನು ಕೊಳ್ಳಲು ಸಹಾಯ ಮಾಡಿತು. ಆಯ್ದ SHGಗಳ ಮೂಲಕ ಇವನ್ನೆಲ್ಲಾ ಸಂಸ್ಕರಣ ಮಾಡಿಸಿತು. CCDಯು ಅನೇಕ ತಿಂಗಳಿನಿಂದ ಬಳಸದೇ ಉಳಿದಿದ್ದ ಯೋಜನಾ ಅನುದಾನವನ್ನು ಕೃಷಿ ಉತ್ಪನ್ನಗಳನ್ನು ಕೊಳ್ಳಲು ಬಳಸಿತು. ಇದನ್ನು ಉತ್ಪನ್ನಗಳ ಮಾರಾಟವಾದ ಮೇಲೆ ತರಬೇತಿ ಚಟುವಟಿಕೆಗಳಿಗಾಗಿ ಯೋಜನಾ ಲೆಕ್ಕಕ್ಕೆ ಹಿಂದಿರುಗಿಸಲಾಯಿತು.

ಹೆಚ್ಚುವರಿ ಆದಾಯದ ಸೃಷ್ಟಿಗಾಗಿ ಮೂಲಸೌಕರ್ಯಗಳ ನಿರ್ಮಾಣಕ್ಕೆ ಕೃಷಿಕರು ಸಮರ್ಥರಾಗುವಂತೆ ಅಆಆಯು ಸಹಾಯ ಮಾಡಿತು. ಸಂಸ್ಕರಣಾ ಯಂತ್ರಗಳಾದ ಬೇಳೆ ಗಿರಣಿ, ಹಿಟ್ಟಿನ ಗಿರಿಣಿ, ಎಣ್ಣೆ ಗಿರಣಿ, ಕುಟ್ಟುವ ಯಂತ್ರಗಳನ್ನು ಸ್ಥಾಪಿಸಲಾಯಿತು. ಮಹಿಳಾ ತಂಡವೊಂದನ್ನು ಸಂಸ್ಕರಣ ತರಬೇತಿಗೊಳಿಸಲಾಯಿತು. ವಸ್ತುಗಳು ಮಾರುಕಟ್ಟೆಗಿಂತ ಶೇಕಡಾ 5ರಷ್ಟು ಕಡಿಮೆ ಬೆಲೆಯಲ್ಲಿ ಗ್ರಾಹಕರಿಗೆ ಸಿಗುತ್ತಿತ್ತು. ಮಧ್ಯವರ್ತಿಗಳನ್ನು ಹೊರಗಿಟ್ಟಿದ್ದರಿಂದ ಮತ್ತು ತೂಕದಲ್ಲಿನ ತಪ್ಪುಗಳಂತಹ ಸಣ್ಣ ಕಳವುಗಳ ನಷ್ಟದ ನಿಯಂತ್ರಣದಿಂದ ಉತ್ಪಾದಕರು ಶೇಕಡಾ 10 ರಿಂದ 15ರಷ್ಟು ಹೆಚ್ಚಿನ ಆದಾಯ ಗಳಿಸಲು ಸಾಧ್ಯವಾಯಿತು. ಈ ಗ್ರಾಹಕ ಸಹಕಾರವು 300 ಕುಟುಂಬಗಳೊಂದಿಗೆ ಪ್ರಾರಂಭವಾಯಿತು. ಪ್ರತಿಯೊಬ್ಬರೂ 500 ರೂಪಾಯಿಗಳ ಅಂದರೆ ತಿಂಗಳಿಗೆ 1.5ಲಕ್ಷ ರೂಪಾಯಿಗಳ ದಿನಸಿ ಕೊಳ್ಳಬೇಕಾಗಿತ್ತು. ಈ ಉದ್ಯಮವು ಈಗ 10 ಪಟ್ಟು ಬೆಳೆದಿದೆ. 3,000 ಕುಟುಂಬಗಳನ್ನೊಳಗೊಂಡಿದೆ. ತಿಂಗಳ ದಿನಸಿ ವ್ಯಯ ಪ್ರತಿ ಕುಟುಂಬಕ್ಕೆ 300 ರೂಪಾಯಿಗಳು. ತಿಂಗಳ ವಹಿವಾಟು 9ಲಕ್ಷ ರೂಪಾಯಿಗಳು. ವಾರ್ಷಿಕ ಒಂದು ಕೋಟಿ.

ಮಾರಾಟ ಹೊರತುಪಡಿಸಿ, ಆಹಾರಮ್ ಉದ್ಯಮ ಅಭಿವೃದ್ಧಿ ಸೇವೆಗಳನ್ನು ಅಣಿಗೊಳಿಸಿತು. [Business Development Services BDS]. ಅದರಲ್ಲಿ ಕೃಷಿಕರಿಗೆ ಅಲ್ಪವೆಚ್ಚದ ಕೃಷಿ ತರಬೇತಿ ಮತ್ತು ಹಳೆಯ ಮರೆತುಹೋದ ದೇಸೀ ಅಡುಗೆಗಳ ಕಲಿಕೆಗಳಿದ್ದವು. ಕೃಷಿ ವೆಚ್ಚ ಶೇಕಡಾ 20ರಷ್ಟು ಕಡಿಮೆಯಾಯಿತು. [ಕೀಟನಾಶಕಗಳು, ರಾಸಾಯನಿಕ ಗೊಬ್ಬರಗಳು ಮತ್ತು ಬೀಜಗಳ ಉಳಿತಾಯದಿಂದ] ಅದೇ ಸಮಯದಲ್ಲಿ ಕೃಷಿಕರ ಆದಾಯ ಶೇಕಡಾ 20ರಷ್ಟು ಹೆಚ್ಚಿತು. [ಇಳುವರಿ ಹೆಚ್ಚಳ ಶೇಕಡಾ 10 ಮತ್ತು ನೇರ ಮಾರಾಟದಿಂದಾದ ಲಾಭ ಶೇಕಡಾ 10]

## ಸಂಸ್ಕರಿತ ಉತ್ಪನ್ನಗಳ ಮಾರಾಟ

ಗುಂಪು ಸಂಸ್ಕರಿತ ಆಹಾರಗಳ ತಯಾರಿಕೆಯ ಸಾಹಸಕ್ಕಿಳಿಯಿತು. ಕೃಷಿಕರು ತಮ್ಮ ಉತ್ಪನ್ನಗಳಾದ ಮೆಣಸಿನಕಾಯಿ ಮತ್ತು ಮಾವನ್ನು ಒಟ್ಟುಗೂಡಿಸಿ ಒಂದೆಡೆ ರಾಶಿ ಮಾಡಿದರು. ಪ್ರಾರಂಭದಲ್ಲಿ ಕಚ್ಚಾ ಮಾಲನ್ನೇ ಶೇಕಡಾ 3–4ರಷ್ಟು ಲಾಭಕ್ಕೆ ಮಾರಿದರು. ಸಾಗಾಣಿಕೆಯ ವ್ಯತ್ಯಯದಿಂದಾಗಿ ಅಭದ್ರತೆಗೆ ಈಡಾಯಿತು. ಸಂಗ್ರಹಣೆ, ಸಾಗಾಣಿಕೆ ಮುಂತಾದವುಗಳಿಂದ ತೂಕದಲ್ಲಿ ನಷ್ಟ ಉಂಟಾಯಿತು. ಆದರೆ ನಾಲ್ಕು ವರ್ಷಗಳ ಹಣ್ಣಿನ ಮಾರಾಟದಿಂದಾಗಿ ಕಂಪೆನಿಯು ಮಾವಿನ ತಿರುಳು ತಯಾರಿಕೆ ಕಾರ್ಖಾನೆಯನ್ನು ಅಣಿಗೊಳಿಸಿತು ಮತ್ತು ಪಾರ್ಲೆ ಆಗ್ರೋದಂತಹ ಕಂಪೆನಿಗಳಿಗೆ ಅದನ್ನು ಮಾರತೊಡಗಿತು. ಸಾಮಾನ್ಯವಾಗಿ ಈ ಕಂಪೆನಿಗಳು 'ಫ್ರೂಟಿ' ಮಾರುತ್ತವೆ. ಎರಡು ಕಿಲೋಗ್ರಾಂ ಹಳ್ಳಿತಳಿಯ ಮಾವಿನಹಣ್ಣಿನ ಬೆಲೆ 10 ರೂಪಾಯಿಗಳು. ಸಂಸ್ಕರಣೆಗೆ ಅಷ್ಟೇ ಬೆಲೆ. [ಕೂಲಿ, ಕಾರ್ಖಾನೆವೆಚ್ಚ, ಸಾಲದ ಬಡ್ಡಿ ಇತ್ಯಾದಿ] ಹೀಗಾಗಿ ತಿರುಳಿನ ಉತ್ಪಾದನಾ ವೆಚ್ಚ 20 ರೂಪಾಯಿಗಳು. ಮಾರಾಟ ಬೆಲೆ 22 ರೂಪಾಯಿಗಳು. ತೋರುವುದೇನೆಂದರೆ ಶೇಕಡಾ 10 ಲಾಭ. ಅದೇ ರೀತಿ ಮೆಣಸಿನ ಕಾಯಿ ಮತ್ತು ಅರಿಸಿನದ ಬೆಲೆ ಒಂದು ಕಿಲೋಗ್ರಾಂಗೆ ಏಳರಿಂದ ಹತ್ತು ರೂಪಾಯಿಗಳು. ಇದನ್ನೇ ಹಿಟ್ಟು ಮಾಡಿ ಮಾರಿದರೆ ಖಊಊಉಗಳಿಗೆ ಒಂದು ಕಿಲೋಗ್ರಾಂಗೆ 80ರಿಂದ 100 ರೂಪಾಯಿಗಳು ಸಿಗುತ್ತದೆ. ಜೊತೆಗೆ ಶೇಕಡಾ 10 ಲಾಭ. ಸಂಸ್ಕರಣಾ ಘಟಕಗಳು ಸ್ಥಳೀಯ ಉದ್ಯೋಗಗಳನ್ನೂ ಸಹ ಸೃಷ್ಟಿಸಿತು ಮತ್ತು ನಗರಗಳಿಗೆ ವಲಸೆ ಹೋಗುವುದನ್ನು ನಿಯಂತ್ರಿಸಿತು.

ಆಹಾರಮ್ ಕಂಪೆನಿಯನ್ನು ವಿಶ್ವದಾದ್ಯಂತ ಗುರುತಿಸಲಾಗಿದೆ. ಜೀವಿವೈವಿಧ್ಯ ಸಂರಕ್ಷಣೆ ಆಧಾರಿತ ವಹಿವಾಟುಗಳನ್ನು ಉತ್ತೇಜಿಸುವ ಯುನೈಟೆಡ್ ನೇಶನ್ಸ್‌ನ ಇಕ್ವೆಡಾರ್ ಅವಾರ್ಡ್‌ಗೋಸ್ಕರ ಇಸವಿ 2006ರಲ್ಲಿ ಅಂತಿಮ ಸುತ್ತಿನವರೆಗೂ ಆಯ್ಕೆಯಾಗಿತ್ತು. ಅಆಆಯ ಯಶಸ್ವೀ ಹೆಜ್ಜೆಯು ಅನೇಕ NGOಗಳು ಹಾಗೂ ಅಆಅ ಗಳಿಗೆ ಪರಿಸರಸ್ನೇಹಿ ಗ್ರಾಮೀಣ ಉದ್ಯಮಗಳನ್ನು ಕೈಗೊಳ್ಳಲು ಪ್ರೇರೇಪಣೆಯ ಮೂಲವಾಗಿದೆ.

■ **Utkarsh V Ghate**
Director
Covenant Centre For Development (CCD)
N.India office, Flat 2-27, STR complex, behind Vishwadeep school,
Durg, Chattisgarh-491001. Ph: 09424102440

**ಆಂಗ್ಲ ಮೂಲ: ಲೀಸಾ ಇಂಡಿಯಾ, ಸಂಪುಟ 11, ಸಂಚಿಕೆ 2, ಜೂನ್ 2009**

# ಕೃಷಿಯಲ್ಲಿ ಇರಲಿ ಮಹಿಳೆಗೆ ಮೊದಲ ಆದ್ಯತೆ

■ ಪಿ.ವಿ. ಸತೀಶ್



ಚಿತ್ರಕೃಪೆ: ಡಿಡಿಎಸ್

■ ಕೃಷಿಯಲ್ಲಿ ಜೀವವೈವಿಧ್ಯವನ್ನು ಪೋಷಿಸುವುದು

**ದೇಸೀ ತಳಿಗಳ ಬೀಜದ ಮೇಲೆ ಹಿಡಿತ ಸಾಧಿಸಿ ಕೃಷಿವೈವಿಧ್ಯವನ್ನು ಗ್ರಾಮೀಣ ಮಹಿಳೆಯರು ಮರಳಿ ಪಡೆದಿದ್ದಾರೆ. ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿಯು ಪರ್ಯಾಯ ಪಿಡಿಎಸ್ ಮತ್ತು ಆಹಾರ ಸುಭದ್ರತಾ ಟ್ರಸ್ಟ್ ಪ್ರಾರಂಭಿಸಿ ಆಹಾರ ಹಾಗೂ ಪೌಷ್ಠಿಕಾಂಶಗಳು ಸುಲಭವಾಗಿ ದೊರಕುವಂತೆ ಭರವಸೆ ನೀಡಿದ್ದಲ್ಲದೆ ಮುಂದಾಳತ್ವ ವಹಿಸುವ ಸಾಮರ್ಥ್ಯವನ್ನು ಬಲಗೊಳಿಸುವ ಮೂಲಕ ಮಹಿಳೆಯರನ್ನು ಸಬಲರನ್ನಾಗಿಸಿದೆ.**

ಆಂಧ್ರಪ್ರದೇಶದ ಮೆದಕ್ ಜಿಲ್ಲೆಯ ಆರ್ಥಿಕವಾಗಿ ಹಿಂದುಳಿದ ದಲಿತ ಕುಟುಂಬಗಳ ಸಣ್ಣ ಹಾಗೂ ಅಂಚಿನ ಮಹಿಳಾ ಕೃಷಿಕರೊಂದಿಗೆ ಡೆಕ್ಕನ್ ಡೆವಲಪ್‌ಮೆಂಟ್ ಸೊಸೈಟಿಯು ಕಳೆದ ಎರಡು ದಶಕಗಳಿಂದ ಕೆಲಸ ಮಾಡುತ್ತಿದೆ. ತಮ್ಮ ಕೃಷಿ ಕುರಿತು ಮಹಿಳೆಯರು ಪ್ರಸ್ತಾಪಿಸಿದ ವಿಚಾರಗಳನ್ನು ಪರಿಶೀಲಿಸಿ ಸೊಸೈಟಿಯು ಸೌಕರ್ಯ ಒದಗಿಸಿತು. ಈ ಲೇಖನವು ಅಂತಹ ಕೆಲವು ವಿಚಾರಗಳನ್ನು ಹೇಳುತ್ತದೆ. ಸಾಂಪ್ರದಾಯಿಕ ಕೃಷಿ ಆರ್ಥಿಕತಜ್ಞರ ಮತ್ತು ವಿಜ್ಞಾನಿಗಳ ಚರ್ಚೆಗಳನ್ನು ಮತ್ತು ಆಹಾರದ ಮೇಲಿನ ದೃಷ್ಟಿಕೋನ, ಕೃಷಿಯ ಹುಟ್ಟು ಮತ್ತು ನೆಲದ ಮೇಲಿನ ಪೋಷಣೆಯ ಕುರಿತಾಗಿ ಪ್ರಸ್ತುತುಪಡಿಸಿದ ಅಭಿಪ್ರಾಯಗಳನ್ನು ಅದು ಬದಲಿಸಿತು.

ಇಲ್ಲಿ ಎತ್ತಲಾದ ವಿಷಯ, ಕೃಷಿಯಲ್ಲಿ ಲಿಂಗಾಧಾರಿತ ದೃಷ್ಟಿಕೋನವು ಪುರುಷರ ಅಭ್ಯಾಸಗಳನ್ನೆ ಮಹಿಳೆಯರು ಮಾಡಬೇಕೆ ಅಥವಾ ಕೃಷಿಯಲ್ಲಿ ಮಹಿಳೆಯರಿಗೆ ನಿರ್ದಿಷ್ಟ ಕ್ರಿಯೆಗಳ ಸೃಷ್ಟಿ ಹಾಗೂ ಪೋಷಣೆಗಳಿವೆಯೆ ಎಂಬುದು ಪ್ರಮುಖವಾಗಿ ಪಾರಿಸರಿಕ ಸವಾಲುಗಳನ್ನೆದುರಿಸುತ್ತಿರುವ ಪ್ರದೇಶದ ಸಣ್ಣ ಹಾಗೂ ಅಂಚಿನ ಮಹಿಳಾ ಕೃಷಿಕರ ಪ್ರಶ್ನೆಯಾಗಿ ನಮ್ಮೆದುರು ನಿಲ್ಲುತ್ತದೆ. ಇದನ್ನು ಬಹಳ ಕಾಲದಿಂದಲೂ ಚರ್ಚೆಯಾಗಿ ಎತ್ತುತ್ತಲೇ ಇದ್ದೇವೆ. ದಶಕಗಳಿಂದಲೂ 5,000ಕ್ಕೂ ಹೆಚ್ಚು ಮಹಿಳಾ ಕೃಷಿಕರ ಜೊತೆ ನಮ್ಮ ಇತರೆ ಕೆಲಸಗಳೊಂದಿಗೆ, ಹೇರಳ ಸಂಪರ್ಕ, ಸುದೀರ್ಘ ಸಂವಾದವನ್ನು ನಡೆಸುತ್ತಲೇ ಇದ್ದೇವೆ. ಈ ವಿಷಯವಾಗಿ ಅವರ ಚಿಂತನೆಗಳಿಗೆ ಕನ್ನಡಿ ಹಿಡಿವ ಸ್ಥಾನದಲ್ಲಿದ್ದೇವೆ.

ಮಹಿಳೆಯರು ನಡೆಸುವ ಕೃಷಿ ಕ್ರಿಯೆಯು ಮಾನವೀಯ ಗುಣಲಕ್ಷಣಗಳಿಂದ ಕೂಡಿದ ಕಾರ್ಯವಿಧಾನವಾಗಿದೆ. ಡಿಡಿಎಸ್‌ನ ಮಹಿಳಾ ಕೃಷಿಕರ ಪ್ರಾಸಂಗಿಕ ಕತೆಗಳ ಜೊತೆ ಇದನ್ನು ವಿವರಿಸುತ್ತೇನೆ.

ಭೂಮಿಯನ್ನೇ ತೆಗೆದುಕೊಳ್ಳೋಣ. ಅವರಿಗೆ ಆಕೆ ಅಖಂಡ ಭೂಮಿತಾಯಿ. ಆಕೆ ತುಂಡುತುಂಡಾದ ನಿವೇಶನಗಳಲ್ಲ ಅಥವಾ ಕಾಳುಗಳನ್ನು ಉತ್ಪಾದಿಸುವ ಜೀವವಿಲ್ಲದ ಯಂತ್ರಗಳಲ್ಲ. ಆಕೆ ಬದುಕಿನ ಆಸರೆ.

ಈ ಅಂಶದ ಆಧಾರದ ಮೇಲೆ ಬೆಳೆ ಬೆಳೆವ ಸಂಪೂರ್ಣ ಕಾರ್ಯವಿಧಾನವನ್ನು ಮಹಿಳೆಯರು ಮಾನವರ ಭ್ರೂಣಾವಸ್ಥೆಯಿಂದ ಮಗುವಿನ ಬೆಳವಣಿಗೆಯವರೆಗಿನ ಕ್ರಿಯೆಯಂತೆ ನೋಡತೊಡಗಿದರು.

- ಬೆಳೆಗಳು ತೆನೆಯೊಡೆವ ಹಂತದಲ್ಲಿ ಭೂಮಿತಾಯಿಯು ಬಸುರಿಯಾಗಿದ್ದಾಳೆ. [ಭೂತಲ್ಲಿ ಪೊಟ್ಟತೋನಿ ಉಂದಿ]
- ಕಾಳುಗಟ್ಟುವಾಗ ಹಾಲು ಕುಡಿಸುತ್ತಿದೆ [ಪಾಲು ತಾಗುತಿಂದಿ]
- ಕಾಳುಗಟ್ಟಿದ ಮೇಲೆ ಹೆರಿಗೆಗೆ ಸಿದ್ಧವಾಗಿದೆ [ಪೊಟ್ಟಕೊಚಿಂದಿ]

ಉದಾಹರಣೆಗಳು ಅಸಂಖ್ಯ. ಆದರೆ ಅವೆಲ್ಲಾ ಒಂದು ವಿಷಯವನ್ನು ಸೂಚಿಸುತ್ತವೆ. ಮಹಿಳಾ ಕೃಷಿಕರು ಸಂಪೂರ್ಣ ಕೃಷಿ ಕಾರ್ಯವಿಧಾನವನ್ನು ಬದುಕಿನ ಚಕ್ರದಂತೆ ನೋಡುತ್ತಾರೆ. ಹುಟ್ಟು, ಬೆಳವಣಿಗೆ, ಪ್ರೌಢಾವಸ್ಥೆ ಹಾಗೂ ಮರುಹುಟ್ಟುವಿಕೆಯೆಂಬ ಕಾರ್ಯವಿಧಾನದಲ್ಲಿ ಮತ್ತು ಪೋಷಣೆಯ ಚಕ್ರದಲ್ಲಿ ಆಹಾರ ಉತ್ಪಾದನೆಯಾಗುತ್ತದೆ. ಈ ದೃಷ್ಟಿಕೋನವು ಕೃಷಿ ಹಸುರು ಕ್ರಾಂತಿಯಲ್ಲಿ ಹೇಳುವ "ಬೆಣ್ಣೆಯಿಂದ ಸುಣ್ಣ ಬಂತು" ಎಂಬ ಹೇಳಿಕೆಗಿಂತ ವಿಭಿನ್ನ. ಈ ಒಳನೋಟವು ಆ ಮಹಿಳೆಯರು ನಮಗೆ ನೀಡಿದ ಕೊಡುಗೆ.

ಡಿಡಿಎಸ್‌ನ ಮಹಿಳಾ ಸಂಘಗಳು ತಮ್ಮ ಮೊದಲ ಹೆಜ್ಜೆಯಿಂದಲೇ ಕೃಷಿಯ ಮೇಲೆ ಸಂಪೂರ್ಣ ನಿಯಂತ್ರಣದ ಭರವಸೆ ನೀಡಿದರು. ಜೊತೆಗೆ ತಮಗಾಗಿ ಮತ್ತು ಕುಟುಂಬದ ಮಕ್ಕಳಿಗಾಗಿ ಆಹಾರ ಮತ್ತು ಪೌಷ್ಠಿಕಾಂಶಗಳ ನಿರಂತರ ಮಾರ್ಗ, ಆಹಾರ ಮತ್ತು ಬೀಜಗಳ ಸಾಮುದಾಯಿಕ ಸುಭದ್ರತೆಯ ಭರವಸೆಯನ್ನು ನೀಡಿದರು. ಡಿಡಿಎಸ್ ಸಂಘಗಳು ತಮಗೋಸ್ಕರ ವರ್ಷಗಳಿಂದ ರೂಪಿಸಿದ ನಡವಳಿಕೆಗಳ ಅಂಶಗಳು ಈ ಕೆಳಗಿವೆ.

ಹುಟ್ಟಿದಾರಭ್ಯದಿಂದಲೂ ತನ್ನ ಸದಸ್ಯರ ಆಹಾರದ ಮಾರ್ಗದ ಕುರಿತಾಗಿಯೇ ಡಿಡಿಎಸ್ ಕೆಲಸ ಮಾಡುತ್ತಿದೆ. ಪ್ರಾರಂಭದ ವರ್ಷಗಳಲ್ಲಿ ಈ ಮಾರ್ಗವು ಸಾರ್ವಜನಿಕ ಹಂಚಿಕೆ ಪದ್ಧತಿಯಲ್ಲಿ (ಪಿಡಿಎಸ್) ನಿರಂತರವಾಗಿ ಮಹಿಳೆಯರು ಧಾನ್ಯಗಳನ್ನು ಕೊಳ್ಳಲು ಸಾಧ್ಯವಾಗುವಂತೆ ಬಡ್ಡಿರಹಿತ ಸಾಲಗಳನ್ನು ಅವರಿಗೆ ಒದಗಿಸುವುದು ಗುರಿಯಾಗಿತ್ತು. [ಪಡಿತರವು ಹಳ್ಳಿಗೆ ಬಂದಾಗ ಅವರಲ್ಲಿ ಹಣವಿರುತ್ತಿರಲಿಲ್ಲ. ಅದಕ್ಕಾಗಿ ಅನೇಕರು ಪಡಿತರವನ್ನು ಕೊಳ್ಳಲಾಗದೇ ಹಿಂದಿರುಗಲು ಬಿಟ್ಟುಬಿಡುತ್ತಿದ್ದರು] ಅದೇ ರೀತಿ

ಕೊಯ್ಲಿನ ಸಮಯದಲ್ಲಿ ಬೆಲೆಯು ಅತ್ಯಂತ ಕನಿಷ್ಠವಾಗಿರುವಾಗ ಲಾಭದಾಯಕ ಸಮಯದಲ್ಲಿ ಮಾರುಕಟ್ಟೆಯಿಂದ ಧಾನ್ಯಗಳನ್ನು ತರಲೂ ಸಹ ಸಾಲ ನೀಡಲಾಗುತಿತ್ತು.

ಆದರೆ, ಇದು ಅವರು ಆಹಾರದ ಸ್ವಾಯತ್ತತೆ ಹೊಂದಲು ಉತ್ತಮ ಕೌಶಲ್ಯವಲ್ಲ ಎಂಬುದು ಡಿಡಿಎಸ್‌ಗೆ ಬಲುಬೇಗ ತಿಳಿಯಿತು. ಅದಕ್ಕಾಗಿ ಎರಡನೇ ಹಂತದಲ್ಲಿ, ಬಂಡವಾಳ ಹಾಕಿ ಚೈತನ್ಯಗೊಳಿಸುವ ಸಾಮರ್ಥ್ಯವಿಲ್ಲದೇ ಹಾಳುಬಿಟ್ಟ ಅವರದೇ ಸ್ವಂತ ಭೂಮಿಯನ್ನು ಕೃಷಿಯೋಗ್ಯವಾಗಿಸುವ ಸಹಾಯ ಮಾಡಲು ಪ್ರಾರಂಭ. ಸುಮಾರು ಹತ್ತು ವರ್ಷಕ್ಕೂ ಹೆಚ್ಚಿನ ಅವಧಿಯಲ್ಲಿ "ಪರಿಸರ ಕಾಯಕ" ಎಂಬ ಕಾರ್ಯಕ್ರಮದಡಿಯಲ್ಲಿ ಡಿಡಿಎಸ. ತನ್ನ ಸದಸ್ಯರ ಒಡೆತನದ 5,000 ಎಕರೆಯಷ್ಟು ಅಂಚಿನ ಭೂಮಿಯಲ್ಲಿ ಹತ್ತು ಲಕ್ಷ ಮಾನವ ದಿನಗಳ ಉದ್ಯೋಗ ಕೈಗೊಂಡಿದೆ. ಭಾಗವಹಿಸಿದ ಎಲ್ಲಾ ಕುಟುಂಬಗಳಿಗೆ ಆಹಾರ ಲಭ್ಯತೆಯ ಪ್ರಮಾಣ ಶೇಕಡಾ 400ರಷ್ಟು ಹೆಚ್ಚಿದೆ. ಈ ಕಾರ್ಯಕ್ರಮದಡಿಯಲ್ಲಿ ಬೀಳುಬಿಟ್ಟ ಭೂಮಿಯು ಮಹಿಳೆಯರಿಂದ ಕೃಷಿಗೊಳಗಾದ ಮೊದಲ ವರ್ಷ ಒಂದು ಎಕರೆಗೆ ಕೇವಲ 50 ಕಿಲೋಗ್ರಾಂಗೂ ಕಡಿಮೆ ಇಳುವರಿ ನೀಡುತ್ತಿತ್ತು. ಪರಿಸರ ಕಾಯಕದ ಮೂಲಕ ಮಹಿಳೆಯರು ಬದುಗಳನ್ನು ನಿರ್ಮಿಸಿದರು, ಕಲ್ಲುಗಳನ್ನು ಹೊರಹಾಕಿದರು ಮತ್ತು ಮೇಲ್ಮಣ್ಣನ್ನು ಅಗತ್ಯವಿರುವಲ್ಲಿ ಸೇರಿಸಿದರು. ಮಹಿಳೆಯರ ಕಠಿಣ ಶ್ರಮ ಹಾಗೂ ಮಣ್ಣಿಗೆ ಪುನರ್‌ಜೀವನ ಸಿಕ್ಕಿದ್ದರಿಂದ ಹೊಲದಲ್ಲಿ ಬೆಳೆದ ಒಂದು ವಿಧದ ಧಾನ್ಯವು ಒಂದು ಎಕರೆಗೆ ಸುಮಾರು 200ರಿಂದ 300ಕಿಲೋಗ್ರಾಂಗಳಷ್ಟು ಇಳುವರಿ ನೀಡಲು ಪ್ರಾರಂಭಿಸಿತು. ಇದರಿಂದ ಅವರು ತಮ್ಮ ಪರಂಪರಾಗತ ಕೃಷಿ ಪದ್ಧತಿಯಲ್ಲಿ ಸಿರಿಧಾನ್ಯಗಳು, ದ್ವಿದಳಧಾನ್ಯಗಳು ಹಾಗೂ ಎಣ್ಣೆಕಾಳುಗಳನ್ನು ಅಲ್ಲಿ ಬೆಳೆದರು. ಕೇವಲ ಏಕದಳ ಧಾನ್ಯಗಳೊಂದೇ ಅಲ್ಲ, ಅತ್ಯಂತ ಪೌಷ್ಠಿಕಾಂಶಭರಿತ ಬೇಳೆಕಾಳುಗಳ. ಹಾಗೂ ಎಣ್ಣೆಕಾಳುಗಳು ಕುಟುಂಬದೊಳಗೆ ಪ್ರವೇಶ ಪಡೆದವು. ಹೀಗೆ ಜೊತೆಯಲ್ಲಿ ಹೆಚ್ಚುವರಿ ಆಹಾರ, ಪೌಷ್ಠಿಕಾಂಶಗಳೂ ಕುಟುಂಬದ ಅಡುಗೆಮನೆ ಪ್ರವೇಶಿಸಿದವು. 2,000ದಿಂದ 3,000ಕ್ಕೂ ಹೆಚ್ಚು ಮಹಿಳೆಯರು ತಮಗೆ ಹಾಗೂ ಕುಟುಂಬದ ಪೋಷಣೆಯೊಂದಿಗೆ ತಮ್ಮ ಆಹಾರ ಹಾಗೂ ಪೌಷ್ಠಿಕಾಂಶದ ಭದ್ರತೆಯನ್ನು ನಾಲ್ಕರಿಂದ ಐದುಪಟ್ಟು ಹೆಚ್ಚಿಸಲು ಸಾಧ್ಯವಾಯಿತು. ಇನ್ನೊಂದು ಗಮನೀಯ ವಿಚಾರವೆಂದರೆ ಈ ಕಾರ್ಯಕ್ರಮದ ಮೂಲಕ ತಮ್ಮ ನೆಲದಲ್ಲಿ ಮಹಿಳೆಯರು ತಮ್ಮದೇ ಪರಂಪರಾಗತ ಸಿರಿಧಾನ್ಯಗಳನ್ನಾಧರಿಸಿದ ಕೃಷಿಯನ್ನು ಆಚರಿಸತೊಡಗಿದರು. ಹೀಗೆ ಅವರ ಕುಟುಂಬಕ್ಕೆ ಬಂದ ಆಹಾರ ಅಕ್ಕಿಯಲ್ಲ. ಅದು ಕಾಳು!! ಪೌಷ್ಠಿಕಾಂಶದ ಪಟ್ಟಿಯಲ್ಲಿ ಕನಿಷ್ಠ ಮೆಟ್ಟಿಲಿನಲ್ಲಿರುವ ತೃಣಧಾನ್ಯಗಳು!!. ಅವರೀಗ ವೈವಿಧ್ಯಮಯ ಸಿರಿಧಾನ್ಯಗಳನ್ನು ಬೆಳೆಸುತ್ತಾರೆ ಹಾಗೂ ಉಣ್ಣುತ್ತಾರೆ. ಅದರಲ್ಲಿ ಕೆಂಪುಜೋಳ, ಸಜ್ಜೆ, ನವಣೆ, ಬರಗು, ಹಾರಕ ಹಾಗೂ ಊದಲುಗಳು ಸೇರಿವೆ.

## ಸಮುದಾಯದ ನಿಯಂತ್ರಣದಲ್ಲಿ ಆಹಾರ ಸುಭದ್ರತೆ

ಮೂರನೆಯ ಹಾಗೂ ಪ್ರಮುಖ ಬೀಜದಂತಹ ಹೆಜ್ಜೆ. ಸಮುದಾಯ ಧಾನ್ಯ ಬ್ಯಾಂಕ್ ಮೂಲಕ ಸಾರ್ವಜನಿಕ ಆಹಾರ ಹಂಚಿಕೆಯನ್ನು ಡಿಡಿಎಸ್ ಇಸವಿ 1994ರಲ್ಲಿ ಪ್ರಾರಂಭಿಸಿತು. ಕೆಂಪು ಜೋಳ [ಅತ್ಯಂತ ಪೌಷ್ಠಿಕಾಂಶಭರಿತ ಸ್ಥಳೀಯ ಕಿರುಧಾನ್ಯ] ಆಧಾರಿತ ಸಾರ್ವಜನಿಕ ಆಹಾರ ಹಂಚಿಕೆ ಕಾರ್ಯಕ್ರಮವು ಸ್ಥಳೀಯ ಉತ್ಪಾದನೆ, ಸ್ಥಳೀಯ ಸಂಗ್ರಹ ಹಾಗೂ ಸ್ಥಳೀಯ ಹಂಚಿಕೆಯ ಭರವಸೆ ಹೊಂದಿತ್ತು. ಇದು 30 ಹಳ್ಳಿಗಳ ಅಂಚಿನ ರೈತರಿಗೆ ಆರ್ಥಿಕ ಸಹಕಾರದ ಮುಂಗಡ ನೀಡುವ ಮೂಲಕ ನಡೆಸುವ ಕಾರ್ಯವಾಗಿತ್ತು. ಅವರು ಮೊದಲ ಹಂತದಲ್ಲಿ ಸರಿಯಾದ ಸಮಯಕ್ಕೆ ಕೃಷಿ ಕೈಗೊಳ್ಳುವುದು, ಕೊಟ್ಟಿಗೆ ಗೊಬ್ಬರ ನೀಡುವುದು, ಇತರ ಕೃಷಿ ಪದ್ಧತಿಗಳನ್ನು ಕೈಗೊಂಡು ತಮ್ಮ ಬೀಳುಬಿದ್ದ ಭೂಮಿಯನ್ನು ಮರುಚೈತನ್ಯಗೊಳಿಸುವುದಾಗಿತ್ತು. ಮುಂಗಡ ಪಡೆದ ಹಣವನ್ನು ಅವರು ಕಾಳುಗಳ ರೂಪದಲ್ಲಿ ಹಿಂದಿರುಗಿಸಬೇಕೆಂಬ ಒಪ್ಪಂದ. ಅದನ್ನು ಅವರ ಹಳ್ಳಿಗಳಲ್ಲೇ ಸಂಗ್ರಹಿಸುವುದು ಮತ್ತು ಹಳ್ಳಿಯಲ್ಲಿರುವ ಅತ್ಯಂತ ಬಡಕುಟುಂಬಗಳಿಗೆ ಅತ್ಯಂತ ಕಡಿಮೆ ಬೆಲೆಯಲ್ಲಿ ಮಾರುವುದು. ಕಾರ್ಯಕ್ರಮಕ್ಕೆ ಸಂಬಂಧಿಸಿದ ಎಲ್ಲಾ ನಿರ್ಧಾರಗಳನ್ನು ಸಮುದಾಯ ತೆಗೆದುಕೊಳ್ಳಬೇಕು. ಪ್ರತಿಹಳ್ಳಿಯಲ್ಲೂ ಈ ಕಾರ್ಯಕ್ರಮದ ಮುಂದಾಳತ್ವ ಹಾಗೂ ನಿರ್ವಹಣೆಗೆ ದಲಿತ ಮಹಿಳಾ ಸಮಿತಿಯನ್ನು ಆಯ್ಕೆ ಮಾಡಲಾಯಿತು. ಹೀಗೆ ತಮ್ಮ ಹಳ್ಳಿಯ ಸಮುದಾಯದ ಆಹಾರದ ಮುಂದಾಳತ್ವವನ್ನು ಮಹಿಳೆಯರು ತೆಗೆದುಕೊಂಡರು. ಇದೊಂದು ಅವರ ವಿಶೇಷ ಸಾಧನೆ.

ಮೊದಲ ಹಂತದಲ್ಲಿ ಇಸವಿ 1994 ರಲ್ಲಿ 32 ಹಳ್ಳಿಗಳಲ್ಲಿ ಸುಮಾರು 1,600 ಕುಟುಂಬಗಳಿಗೆ ಮಾರ್ಗದರ್ಶನ ನೀಡಲಾಯಿತು. ಡಿಡಿಎಸ್ ಅನುಭವಗಳನ್ನು ಇಲ್ಲಿ ನೀಡಲಾಗಿದೆ.

- ಈ ಪರ್ಯಾಯ ಪಿಡಿಎಸ್ ಮೂಲಕ ಮಹಿಳೆಯರು 2,600 ಎಕರೆಗೂ ಹೆಚ್ಚು ಬೀಳು ಭೂಮಿಯನ್ನು ಉಳುಮೆ ಮಾಡಿದರು.
- ಯೋಜನೆಯ ಮೊದಲ ವರ್ಷದಲ್ಲೇ 8ಲಕ್ಷ ಕಿಲೋಗ್ರಾಂಗಳಿಗೂ ಅಧಿಕ ಕೆಂಪುಜೋಳವನ್ನು ತಮ್ಮ ಹಳ್ಳಿಯಲ್ಲಿ ಉತ್ಪಾದಿಸಿದರು. ಇದು ಹೇಳುವುದೇನೆಂದರೆ 30 ಹಳ್ಳಿಗಳಿಂದ ಮೂರು ದಶಲಕ್ಷಕ್ಕೂ ಅಧಿಕ ಊಟವನ್ನು ಉತ್ಪಾದಿಸಲು ಅವರು ಅರ್ಹರು ಅಥವಾ ಭಾಗವಹಿಸಿದ ಪ್ರತಿ ಕುಟುಂಬಕ್ಕೂ 1,000ಕ್ಕೂ ಅಧಿಕ ಊಟ ಉತ್ಪಾದಿಸಬಲ್ಲರು. ಈ ಘಟನೆಯಿಂದ ಕೃಷಿಯಲ್ಲಿ ಅಧಿಕ ಫಲವತ್ತಾದ ಪ್ರದೇಶದಲ್ಲಿ ಮಾತ್ರ ಹಸುರು ಕ್ರಾಂತಿಯ ಮಾದರಿಯು ಈ ದೇಶಕ್ಕೆ ಆಹಾರಭದ್ರತೆಯನ್ನು ತಂದುಕೊಡಬಲ್ಲದು ಎಂಬ ಕಟ್ಟುಕಥೆಯೊಂದನ್ನು ಅವರು ಸ್ಫೋಟಗೊಳಿಸಿದ್ದರು.
- ಕಾರ್ಯಕ್ರಮವು ಜಾರಿಯಾದಂತೆ ಪ್ರತಿ ಹಳ್ಳಿಯಲ್ಲೂ ಕ್ರಮೇಣ ಹೆಚ್ಚುವರಿ ಉದ್ಯೋಗ ಸೃಷ್ಟಿಯಾಯಿತು. ಒಂದು ಎಕರೆಗೆ ಸುಮಾರು 75 ಮಾನವ ದಿನಗಳು ಹೆಚ್ಚಿತ್ತು. ಅಂದಾಜು ಲೆಕ್ಕ ಹಳ್ಳಿಯೊಂದಕ್ಕೆಸುಮಾರು 8,000 ಮಾನವ ದಿನಗಳ ಉದ್ಯೋಗ.
- ಈ ರೀತಿಯ ಸದೃಢ ಹಾಗೂ ಸುಸ್ಥಿರ ಉದ್ಯೋಗ ಸೃಷ್ಟಿಯ ನೇರ ಪರಿಣಾಮ ಬಡವರ ಕೊಳ್ಳುವ ಶಕ್ತಿಯ ಮೇಲಾಗಿತ್ತು. ಮುಖ್ಯವಾಹಿನಿಯ ಪಿಡಿಎಸ್‌ನೊಂದಿಗಿನ ಸಮಸ್ಯೆಯು ಪದೇಪದೇ ಮರುಕಳಿಸಿತು. ಬೇಕಾದಷ್ಟು ಆಹಾರವು ಪಡಿತರ ಅಂಗಡಿಯಲ್ಲಿದ್ದರೂ ಜನರಿಗೆ ಕೊಳ್ಳುವ ಶಕ್ತಿ ಇಲ್ಲದ ಕಾರಣ ಅಲ್ಲಿ ಹಾಗೇ ಉಳಿಯಿತು. ಡಿಡಿಎಸ್‌ನ ಪರ್ಯಾಯ ಪಿಡಿಎಸ್ ಈ ಕಿರಿಕಿರಿಯ ಸಮಸ್ಯೆಗೂ ಸಹ ಪರಿಹಾರ ಹುಡುಕಿತು.
- ಹೊಸದಾಗಿ ಕೃಷಿ ಮಾಡಿದ ಭೂಮಿ ಒದಗಿಸಿದ ಮೇವಿನಿಂದ ಪ್ರತಿವರ್ಷ 30 ಹಳ್ಳಿಗಳ 6,000 ಹಸುಗಳು ಸುಸ್ಥಿರತೆ ಹೊಂದಿದವು.
- ಕಳೆದ ಏಳು ವರ್ಷಗಳ ಹಿಂದೆ ಆಂಧ್ರಪ್ರದೇಶದ ಎಂಟು ಜಿಲ್ಲೆಗಳು 134 ಹಳ್ಳಿಗಳ 7,000 ಎಕರೆಗೂ ಹೆಚ್ಚು ಪ್ರದೇಶಕ್ಕೆ ಡಿಡಿಎಸ್ ಈ ಕಾರ್ಯಕ್ರಮವನ್ನು ವಿಸ್ತರಿಸಿತು. ಒಂದು ಲಕ್ಷ

ಜನ ಇದರಿಂದ ಪ್ರಯೋಜನ ಪಡೆದರು. ಈ ಕಾರ್ಯಕ್ರಮದ ಮೂಲಕ ಮಹಿಳೆಯರು ಹಾಗೂ ಮಕ್ಕಳಿಗೆ ಆಹಾರ ಹಾಗೂ ಪೌಷ್ಠಿಕಾಂಶದ ಲಭ್ಯತೆ, ವಿಶೇಷವಾಗಿ ಸಮಾಜದ ಶೋಷಿತವರ್ಗಕ್ಕೆ ನಿಶ್ಚಿತ ಭರವಸೆ ಸಿಕ್ಕಿತು.

## ಸಮುದಾಯ ವಂಶವಾಹಿ ನಿಧಿ

ಡಿಡಿಎಸ್ ಸಂಘಕ್ಕೋಸ್ಕರ ಮುಂದಿನ ಹೆಜ್ಜೆ ಸಮುದಾಯ ವಂಶವಾಹಿ ನಿಧಿ ಕಾರ್ಯಕ್ರಮ. ಇದರ ಗುರಿ, ಡಿಡಿಎಸ್ ಸಮುದಾಯದ ಎಲ್ಲಾ ಮಹಿಳೆಯರಿಗಾಗಿ ಬೀಜ ಸುಭದ್ರತೆ. ಸಾಧಾರಣವಾಗಿ ಹಳ್ಳಿಯ ಮಹಿಳೆಯರ ಮತ್ತು ನಿರ್ದಿಷ್ಟವಾಗಿ ದಲಿತ ಮಹಿಳೆಯರ ಕೈಗೆ ಬೀಜದ ಮೇಲಿನ ನಿಯಂತ್ರಣವನ್ನು ಈ ಕಾರ್ಯಕ್ರಮವು ಮರುವಶಗೊಳಿಸಿಕೊಡುವುದಾಗಿದೆ. ಮಹಿಳೆಯರು ಕೃಷಿ ಕ್ರಿಯೆಯ ಜೊತೆ ಕೃಷಿಯಲ್ಲಿನ ಜೀವಿವೈವಿಧ್ಯದ ಮೇಲೆ ಮತ್ತು ದೇಸೀ ತಳಿಗಳನ್ನೂ ಮರುವಶ ಮಾಡಿಕೊಳ್ಳುವ ಬಹು ಪ್ರಮುಖ ನಡೆಯಾಗಿತ್ತು. ಐದು ವರ್ಷಗಳ ಒಳಗೆ ಈ ಕಾರ್ಯಕ್ರಮದಲ್ಲಿ 900 ಮಹಿಳೆಯರು ಭಾಗವಹಿಸಿ 85 ದೇಸಿ ತಳಿಗಳನ್ನು ಮರುವಶಪಡಿಸಿಕೊಂಡರು. 50 ಹಳ್ಳಿಗಳಲ್ಲಿ ದೇಸಿ ಬೀಜನಿಧಿ ನಿರ್ಮಾಣವಾಯಿತು.

ಹತ್ತು ವರ್ಷಗಳ ನಂತರ ಅವರ ಸಮಾಜದಲ್ಲಿ ಲಿಂಗ ಹಾಗೂ ಜಾತಿ ಸಂಬಂಧಗಳು ಸಂಪೂರ್ಣ ತಿರುವುಮುರುವಿನ ಪರಿಸ್ಥಿತಿ. ಪ್ರತಿ ಡಿಡಿಎಸ್ ಮಹಿಳೆಯ ಮನೆಯಲ್ಲಿ ಈಗ 10–15 ವಿಧಗಳ ಬೀಜಗಳಿವೆ. ಒಂದು ಕಾಲದಲ್ಲಿ, ಮನೆಯಲ್ಲಿ ಆಹಾರಧಾನ್ಯಗಳು ಇಲ್ಲದೆ ಈ ಬೀಜಗಳನ್ನೇ ತಿನ್ನಬೇಕಾಗಿತ್ತು. ಆದರೆ ಈಗ ಆಕೆಯು ಆಹಾರ ಸುಭದ್ರತೆ ಹೊಂದಿದ್ದಾಳೆ. ಬೀಜ ಸುಭದ್ರತೆಯತ್ತ ನಡೆದಿದ್ದಾಳೆ. 55 ಹಳ್ಳಿಗಳಲ್ಲಿ 10 ವರ್ಷ ಹಳೆಯ ಸಮುದಾಯ ವಂಶವಾಹಿ ನಿಧಿಗಳಿವೆ. ಹಳ್ಳಿಯ ಸಂಘ ಆಯ್ಕೆ ಮಾಡಿದ ಒಂದಿಬ್ಬರು ಬೀಜಮಾತೆಯರು ಇದನ್ನು ನಿರ್ವಹಿಸುತ್ತಿದ್ದಾರೆ. ಪ್ರತಿ ಸಮುದಾಯ ವಂಶವಾಹಿ ನಿಧಿಯೂ 50ರಿಂದ 80 ವಿಧದ ಬೀಜಗಳನ್ನು ಸಂಗ್ರಹಿಸಿವೆ. ಯಾರು ಬೇಕಾದರೂ ಈ ನಿಧಿಯಿಂದ ಬೀಜವನ್ನು ಪಡೆದು ಬೀಜದ ರೂಪದಲ್ಲೇ ಒಂದು ಪ್ರಮಾಣದಷ್ಟು ಹಿಂದಿರುಗಿಸಬೇಕು. ಇಲ್ಲಿಗೆ ಬೀಜ ಕೊಳ್ಳಲು ಮೇಲ್ಜಾತಿಯವರು ಮತ್ತು ಪುರುಷರು ಬರುತ್ತಾರೆ. ಹೀಗೆ ಲಿಂಗ ಹಾಗೂ ಜಾತಿ ಆಧಾರಿತ ಶಕ್ತಿಶಾಲಿ ಸಂಬಂಧಗಳು ತಿರುವುಮುರುವಾಗಿದೆ. 20 ವರ್ಷಗಳ ಹಿಂದೆ ದಲಿತ ಮಹಿಳೆಯರು ಮೇಲ್ಜಾತಿಯ ಪುರುಷರ ಬಳಿ ಬೀಜಗಳನ್ನು ಬೇಡಲು ಹೋಗುತ್ತಿದ್ದರು. ಬೀಜ ಕೋರುವಿಕೆಯಿಂದ ಬೀಜ ಒದಗಿಸುವ ಬದಲಾದ ಸ್ಥಾನಮಾನದಿಂದಾಗಿ ದಲಿತ ಮಹಿಳೆಯು ಕೃಷಿಯಲ್ಲಿ ಲಿಂಗಾಧಾರಿತ ಕ್ರಾಂತಿಗೆ ನಿಜವಾಗಿಯೂ ಮುನ್ಸೂಚನೆ ನೀಡಿದ್ದಾಳೆ.

## ಮಕ್ಕಳ ಪಾಲನೆ ಮತ್ತು ಪೌಷ್ಠಿಕತೆ

ಮಹಿಳೆಯರು ಹಾಗೂ ಮಕ್ಕಳಿಗಾಗಿ ಮನೆಯೊಳಗಿನ ಪೌಷ್ಠಿಕತೆಯ ಸ್ಥಾನಮಾನದ ನಿಶ್ಚಿತ ಬೆಳವಣಿಗೆಯನ್ನು ಹೊರತುಪಡಿಸಿ, ಡಿಡಿಎಸ್ ಸಮುದಾಯವು ಈ ಕೆಲವು ಪ್ರಯತ್ನಗಳನ್ನು ಸಾಂಸ್ಥಿಕಗೊಳಿಸಿದೆ. ಇಸವಿ 1998ರಿಂದ ಡಿಡಿಎಸ್ ಸಂಘವು ಸ್ವಂತ ಬಾಲವಾಡಿಗಳನ್ನು ನಡೆಸುತ್ತಿದೆ. ಮಕ್ಕಳಿಗೊಂದು ಹಗಲಿನ ಪಾಲನಾಕೇಂದ್ರ. ಇಸವಿ 1996ರಲ್ಲಿ ತಮ್ಮ ಮಕ್ಕಳ ಆಹಾರಪಟ್ಟಿಯಲ್ಲಿ ಪ್ರಮುಖವಾಗಿ ಸಿರಿಧಾನ್ಯಗಳು ಮೂಲವಾಗಿರುವಂತೆ ಮರುವಿನ್ಯಾಸಗೊಳಿಸಿದರು. ಡಿಡಿಎಸ್ ಹಳ್ಳಿಗಳಲ್ಲಿನ ಕನಿಷ್ಠ ಆದಾಯ ಹೊಂದಿರುವ ಕುಟುಂಬಗಳಿಂದ ಬರುವ ಮಕ್ಕಳಿಗೆ ನಿತ್ಯದ ಊಟದಲ್ಲಿ ಉತ್ತಮ ಆಹಾರ ಲಭ್ಯವಾಗುವ ಭರವಸೆಯನ್ನು ಇದು ನೀಡುತ್ತದೆ. ಸೊಸೈಟಿಯು ಡಿಡಿಎಸ್ ಬಾಲವಾಡಿಯ ಮಕ್ಕಳ ಮೇಲೆ ಅನೇಕ



■ ಭೂಮಿಯ ಗುತ್ತಿಗೆಯಿಂದ ಹೆಚ್ಚು ಆಹಾರವನ್ನು ಪಡೆಯುವುದು

ಅಧ್ಯಯನಗಳನ್ನು ಮಾಡಿದೆ. ಬೇರೆ ಬಾಲವಾಡಿಗಳ ಮಕ್ಕಳಿಗೆ ಹೋಲಿಸಿದರೆ ಪೌಷ್ಠಿಕತೆಯ ಸ್ಥಾನವು ಡಿಡಿಎಸ್ ಬಾಲವಾಡಿಯ ಮಕ್ಕಳಲ್ಲಿ ಕನಿಷ್ಠ ಶೇಕಡಾ 30ರಿಂದ ಶೇಕಡಾ 50ರಷ್ಟು ಹೆಚ್ಚಿರುವುದೆಂದು ಗುರುತಿಸಲಾಗಿದೆ.

## ಹಸಿದವರನ್ನು ಗುರುತಿಸುವಿಕೆ ಮತ್ತು ಸಮುದಾಯ ಅಡುಗೆಮನೆ

ಈ ಎಲ್ಲಾ ಸಾಧನೆಗಳನ್ನೂ ಮೀರಿದ ಕೆಲಸ, ಇಸವಿ 2006ರಲ್ಲಿ ಮಹಿಳೆಯರು ತಮ್ಮ ಸಮುದಾಯದ ಹಸಿದವರ ಗುರುತು ಮಾಡಲು ಪ್ರಾರಂಭಿಸಿದರು.

ದಟ್ಟದರಿದ್ರರನ್ನು ಮತ್ತು ಕೈಲಾಗದವರನ್ನು ಗುರುತಿಸಿದರು. ಇಸವಿ 2007ರಲ್ಲಿ ತಮ್ಮದೇ ಧಾನ್ಯ ಹಾಗೂ ಸ್ವಯಂಸೇವೆಯ ಮೂಲಕ ಸಮುದಾಯ ಅಡುಗೆಮನೆ ಪ್ರಾರಂಭಿಸಿದರು. ದಿನಕ್ಕೆ 100/– ರೂಪಾಯಿಗಳಿಗಿಂತಲೂ ಕಡಿಮೆ ಗಳಿಕೆಯಿರುವ ಜನರಿಗಾಗಿ. ಇದು ಯಾವುದೇ ಕೋನದಿಂದ ನೋಡಿದರೂ ನಿಶ್ಚಿತವಾಗಿಯೂ ಗಮನಾರ್ಹವಾಗಿತ್ತು.

ಮಹಿಳೆಯರು ಆಹಾರ ಮತ್ತು ಕೃಷಿಪದ್ಧತಿಗಳನ್ನು ಮರುಪಡೆಯಲು ಏನೆಲ್ಲಾ ತೊಂದರೆಗೊಳಗಾದರೂ ಅವರ ಕುಟುಂಬಕ್ಕೆ ಹಾಗೂ ಅವರಿಗೆ ಸಿಕ್ಕ ಆರೋಗ್ಯ ಹಾಗೂ ಪೌಷ್ಠಿಕಾಂಶದ ಲಾಭಗಳನ್ನು ಖಂಡಿಸಲಾಗದು.

ಇಸವಿ 2006ರಲ್ಲಿ ಡಿಡಿಎಸ್‌ನ ಮತ್ತೊಂದು ಪ್ರಮುಖ ಹೆಜ್ಜೆ. ಒಂಭತ್ತು ಸ್ಥಳೀಯ ದಲಿತ ಮಹಿಳೆಯರಿರುವ ಆಹಾರ ಸುಭದ್ರತಾ ಟ್ರಸ್ಟ್ ಸ್ಥಾಪನೆ. ಸೊಸೈಟಿಯ ಕೃಷಿ ಹಾಗೂ ಆಹಾರ ಸುಭದ್ರತೆ



ಫೋಟೋ: ಡಿಡಿಎಸ್

■ ಮಹಿಳೆಯರೇ ನಿರ್ವಹಿಸುವ ವಂಶವಾಹಿ ಬ್ಯಾಂಕುಗಳು

ಕಾರ್ಯಕ್ರಗಳ ನಂತರವೂ ಟ್ರಸ್ಟ್‌ಗೆ ತನ್ನದೇ ಆದ ಸಂಚಿತ ನಿಧಿ ಇದೆ. ಡಿಡಿಎಸ್ ಆಹಾರ ಸುಭದ್ರತಾ ಟ್ರಸ್ಟ್‌ನ ಮೂಲ ಉದ್ದೇಶ ಅವರ ಆಹಾರ ಉತ್ಪಾದನೆ, ಸಂಗ್ರಹ ಹಾಗೂ ಹಂಚಿಕೆ ಪದ್ಧತಿಗಳನ್ನು ಸಮುದಾಯಮಟ್ಟದಲ್ಲಿ ಸಂಪೂರ್ಣ ಸ್ವಾಯತ್ತತೆ ಹೊಂದುವಂತೆ ಸಹಾಯ ಮಾಡುವುದರ ಮೂಲಕ ಬಡವರಿಗೆ ಗೌರವಯುತ ಬದುಕನ್ನು ಮರಳಿ ನೀಡುವುದಾಗಿದೆ.

ಅಂತಿಮ ವಿಶ್ಲೇಷಣೆಯಲ್ಲಿ ಮಹಿಳೆಯರ ಯಶೋಮಾಲೆಯಲ್ಲಿ ಕೃಷಿ, ಆಹಾರ ಮತ್ತು ಪೌಷ್ಠಿಕತೆಗಳ ಹೆಜ್ಜೆಗಳ ಜೋಡಣೆ, ಡಿಡಿಎಸ್ ಅವರ ಮೂಲ ಅಗತ್ಯಗಳಾದ ಆಹಾರ, ಪೌಷ್ಠಿಕತೆ ಮತ್ತು ಆರೋಗ್ಯ ಭದ್ರತೆಗಳ ಭರವಸೆಗಳನ್ನು ತಲುಪಿದ್ದೊಂದೇ ಅಲ್ಲ ಅವರ ಕೌಶಲ್ಯಗಳ ಅಗತ್ಯಗಳಾದ ಮುಂದಾಳತ್ವ ಮತ್ತು ರಾಜಕೀಯದ ಪಾತ್ರಗಳು, ಚರ್ಚೆಗೊಂದು ಚಾವಡಿ ಮತ್ತು ಸಾರ್ವಜನಿಕ ಅಧಿಪತ್ಯದೊಳಗೆ ಕಾಣಿಸುವಂತೆ ಮಾಡಿತು. ಅವರಲ್ಲಿ ಅನೇಕರು ಏಕೈಕ ದಲಿತ ಮಹಿಳಾ ಗುಂಪುಗಳಾಗಿ ಇಂದು ವಿಶ್ವದಾದ್ಯಂತ ಕೆನಡಾದವರೆಗೂ ಸಂಚರಿಸುತ್ತಿದ್ದಾರೆ. ಆಹಾರ ಹಾಗೂ ಕೃಷಿಯ ಕುರಿತಾಗಿ ತಮ್ಮ ದೃಷ್ಟಿಕೋನವನ್ನು ಸ್ಪಷ್ಟಪಡಿಸುತ್ತಿದ್ದಾರೆ. ಹೀಗೆ ಕೃಷಿಯ ಕುರಿತು ಮಹಿಳಾ ದೃಷ್ಟಿಕೋನವನ್ನು ಗೌರವಿಸುವ ಮತ್ತು ಅಭಿವೃದ್ಧಿಪಡಿಸುವ ಮೂಲ ಡಿಡಿಎಸ್ ಮಹಿಳೆ ಮತ್ತು ಕೃಷಿ ಮೇಲಿನ ವ್ಯಾಖ್ಯಾನವನ್ನು ಸಂಪೂರ್ಣ ಬದಲಿಸಿದೆ.

[ಈ ಲೇಖನವು ಆಗಾಖಾನ್ ಫೌಂಡೇಶನ್‌ರವರು ಏರ್ಪಡಿಸಿದ ದಕ್ಷಿಣ ಏಷ್ಯಾ ಮಟ್ಟದ ಕೃಷಿಯಲ್ಲಿ ಮಹಿಳೆ ಎಂಬ ವಿಚಾರವಾಗಿ ಅಂತಾರಾಷ್ಟ್ರೀಯ ಆಹಾರನೀತಿ ಸಂಶೋಧನಾ ಸಂಸ್ಥೆಯವರು ನಡೆಸಿದ ಶಿಬಿರದಲ್ಲಿ ಪ್ರಸ್ತುತುಪಡಿಸಿದ ವಿಷಯದ ತಿರುಳು]

■ **P V Satheesh**
Director, Deccan Development Society,
#101, Kishan Residency, Road No 5,
Begumpet, Hyderabad-500 016,
Andhra Pradesh, India

E-mail: satheeshperiyapatna@gmail.com
ddshyderabad@gmail.com

**ಆಂಗ್ಲ ಮೂಲ: ಲೀಸಾ ಇಂಡಿಯಾ, ಸಂಪುಟ 11, ಸಂಚಿಕೆ 3, ಸೆಪ್ಟೆಂಬರ್ 2009**

